ಜನಶಕ್ತಿ

ಮಿಡಿವ ಜನರ ಪ್ರಾಣಮಿತ್ರ
ಕನ್ನಡ ವಾರಪತ್ರಿಕೆ
Blog : janashakthi.wordpress.com e-mail : js_weekly@yahoo.com
ಸಂಪುಟ 6 ಸಂಚಿಕೆ 04
ಜನವರಿ 22, 2012
ಪುಟ 16
ರೂ. 5/-





ಜನಾಂದೋಲನ ವಿಸ್ತರಣೆ : ಪಕ್ಷದ ಶಕ್ತಿ ಹೆಚ್ಚಿಸುವ ತುಡಿತದ ಅಭಿವ್ಯಕ್ತಿ ಈ ಸಮ್ಮೇಳನ





ಸಂಘ ಪರಿವಾರದ ಕೈಯಲ್ಲಿ ತತ್ತರಿಸುತ್ತಿದೆ ಶಿಕ್ಷಣ

ಹಸಿವು, ಅಪೌಷ್ಟಿಕತೆ : ಪ್ರಧಾನಿ ಹೆಗ್ಗಳಿಕೆಗೆ ಅರ್ಥವೆಲ್ಲಿ?

ಸಂಘ ಪರಿವಾರದ ಕೈಗೆ ಸಿಕ್ಕು ತತ್ತರಿಸುತ್ತಿದೆ ಶಿಕ್ಷಣ ಕ್ಷೇತ್ರ

ರಾಜ್ಯದ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದಾಗಿನಿಂದ ಸಂಘ ಪರಿವಾರದ ಕಪಿಮುಷ್ಠಿಗೆ ಒಪ್ಪಿಸುತ್ತಾ ಶಿಕ್ಷಣದ ಕೇಸರೀಕರಣಕ್ಕೆ ಮುಂದಾಗುತ್ತಿದೆ.

ಅನಂತನಾಯಕ್

ರಾಜ್ಯದ ಶಿಕ್ಷಣ ಕ್ಷೇತ್ರ ಸಂಪೂರ್ಣವಾಗಿ ಸಂಘ ಪರಿವಾರದ ದಾಳಿಗೆ ತತ್ತರಿಸುತ್ತಿದೆ. ಇಡೀ ಕ್ಷೇತ್ರದ ಆಯಕಟ್ಟಿನ ಹುದ್ದೆಗಳಲ್ಲಿ ಸಂಘ ಪರಿವಾರದವರನ್ನು ತುರುಕುವ ಮೂಲಕ ಶಿಕ್ಷಣವನ್ನು ಕೇಸರೀಕರಣ ಮಾಡಲು ಸರ್ಕಾರಿ ಯಂತ್ರವನ್ನು ರಾಜ್ಯ ಸರ್ಕಾರ ಮುಂದಾಗುತ್ತಿದೆ.

ಪ್ರಗತಿಪರ, ವೈಚಾರಿಕ ವಿಚಾರಧಾರೆಗಳನ್ನು ಮೂಲೆಗುಂಪು ಮಾಡಲಾಗುತ್ತಿದೆ.

ಪಠ್ಯಪುಸ್ತಕ ಪರಿಷ್ಕರಣೆಯ ಹೆಸರಿನಲ್ಲಿ ......

ರಾಜ್ಯ ಸರ್ಕಾರ 5, 6, 7ನೇ ತರಗತಿಯ ಪಠ್ಯಪುಸ್ತಕಗಳ ಪರಿಷ್ಕರಣೆಯ ಹೆಸರಿನಲ್ಲಿ ಶಿಕ್ಷಣದ ಕೇಸರೀಕರಣಕ್ಕೆ ಮುಂದಾಗುತ್ತಿದೆ. ಪರಿಷ್ಕರಣೆಗೆ ಚಿಂತಕರ ಸಮಿತಿಯನ್ನು ರಚಿಸುವ ಕುರಿತು ಸ್ಪಷ್ಟ ಮಾಹಿತಿ ನೀಡುತ್ತಿಲ್ಲ. ಬದಲಾಗಿ ಸಂಘ ಪರಿವಾರದ ಮೂಡಂಬಡಿತ್ತಾಯ, ರಾಮ ಜೋಯಿಸ್, ಪಿ.ವಿ.ಕೃಷ್ಣ ಭಟ್ ಮುಂತಾದವರಿಗೆ ಈ ಜವಾಬ್ದಾರಿ ನೀಡಲಾಗಿದೆ ಎನ್ನಲಾಗುತ್ತಿದ್ದು ತೆರೆಮರೆಯಲ್ಲಿ ಈ ಕಾರ್ಯ ವೇಗವಾಗಿ ಸಾಗುತ್ತಿದೆ. ಮನುಧರ್ಮ ಶಾಸ್ತ್ರದ ಚಾತುರ್ವರ್ಣ ಹೇರಿಕೆ ಮತ್ತು ಪ್ರಗತಿ ವಿರೋಧಿ, ಅಂಧಕಾರವನ್ನು ಹೇರುವ ಸಾಹಿತ್ಯವನ್ನು ಧರ್ಮ-ಸಂಸ್ಕೃತಿಯ ಹೆಸರಿನಲ್ಲಿ ಪಠ್ಯದೊಳಗೆ ತುರುಕುವ ಕಾರ್ಯ ಯಥೇಚ್ಛವಾಗಿ ಪ್ರಾರಂಭವಾಗಿದೆ. ಇದನ್ನು ತಡೆಯಲು ಅಧಿಕಾರಿಗಳಿಗೆ ಸಾಧ್ಯವಾಗದೆ ಬಿ.ಜೆ.ಪಿ.ಯ ಆಣತಿಯಂತೆ ಕುಣಿಯುತ್ತಿದ್ದಾರೆ.

ಶಿರಸಿಯ ಸ್ವರ್ಣವಲ್ಲಿ ಮಠಕ್ಕೆ ಭಗವದ್ಗೀತೆ ಅಭಿಯಾನದ ಹೆಸರಿನಲ್ಲಿ **ರೂ. 15 ಕೋಟಿ,** ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತಿಗೆ ಪುಸ್ತಕ ಮಾರಾಟಕ್ಕಾಗಿ **ರೂ. 17 ಕೋಟಿ ಹಣ** ಸೇರಿದಂತೆ ಸಂಘ ಪರಿವಾರದ ಎಲ್ಲ ಸಂಘಟನೆಗಳಿಗೆ ಭೂಮಿಯನ್ನು ಸರ್ಕಾರ ಎಗ್ಗಿಲ್ಲದೆ ನೀಡುತ್ತಿದೆ.

ಆದರೆ, ಸುಮಾರು ಶೇ.76 ರಷ್ಟು ವಿದ್ಯಾರ್ಥಿಗಳು ಅಭ್ಯಸಿಸುತ್ತಿರುವ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯ ನೀಡಲು ಹಣವಿಲ್ಲವೆಂದು ಸರ್ಕಾರ ಬೊಬ್ಬೆ ಹೊಡೆಯುತ್ತಿದೆ. ಅಷ್ಟೇ ಅಲ್ಲದೆ, 3,174 ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗುತ್ತಿದೆ. ಶಾಲಾ ಶಿಕ್ಷಣ ಬಲಪಡಿಸಲು ಅಗತ್ಯ ಶಿಕ್ಷಕರ ನೇಮಕಕ್ಕೆ ಮುಂದಾಗದೆ ಯೋಗ-ಧ್ಯಾನದಂತಹ ಆಧ್ಯಾತ್ಮಿಕ ವಿಚಾರಗಳ ಪ್ರಚಾರಕ್ಕಾಗಿ ಯೋಗ ಗುರುಗಳ ನೇಮಕಕ್ಕೆ ಮುಂದಾಗುತ್ತಿದೆ. ಆದರೆ, ಅಗತ್ಯ ದೈಹಿಕ ಶಿಕ್ಷಕರ ನೇಮಕ ಮಾಡಿಕೊಳ್ಳುತ್ತಿಲ್ಲ.

ವಿ.ವಿ.ಗಳಿಗೆ ಪರಿವಾರಿಗಳ ಲಗ್ಗೆ:

ಬಿ.ಜೆ.ಪಿ. ಇಡೀ ಉನ್ನತ ಶಿಕ್ಷಣ ಕ್ಷೇತ್ರವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಹವಣಿಸುತ್ತಿದ್ದು ಅದಕ್ಕಾಗಿ ಕರ್ನಾಟಕ ಜ್ಞಾನ ಆಯೋಗ, ಉನ್ನತ ಶಿಕ್ಷಣ ಪರಿಷತ್ತುಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ಅಲ್ಲದೆ, ಎಲ್ಲ ವಿ.ವಿ.ಗಳಿಗೆ ಸಂಘ ಪರಿವಾರದ ಹಿನ್ನೆಲೆಯ ಕುಲಪತಿ, ಕುಲಸಚಿವರು ಇತರರನ್ನು ನೇಮಕ ಮಾಡಿಕೊಳ್ಳುವಲ್ಲಿ ತೊಡಗಿದೆ. ರಾಜ್ಯದ ವಿವಿಧ ವಿ.ವಿ.ಗಳ ಸಿಂಡಿಕೇಟ್‌ಗೆ ಸಂಘ ಪರಿವಾರದವರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳ ಲಾಗುತ್ತಿದೆ. ವಿ.ವಿ.ಗಳು ಮೂಲ ಸ್ವರೂಪವನ್ನು ಕಳೆದುಕೊಂಡು ಆರ್.ಎಸ್.ಎಸ್.ನ ಶಾಖೆಗಳಂತಾಗುತ್ತಿವೆ. ಈಗಾಗಲೇ ಬೆಂಗಳೂರು, ಬಿಜಾಪುರ, ತುಮಕೂರು ಹಾಗೂ ಇತರೇ ವಿ.ವಿ.ಗಳು ಸಮಸ್ಯೆಯ ಸುಳಿಯಲ್ಲಿ ಸಿಲುಕಿವೆ.

ಬಯಲಾಗುತ್ತಿರುವ ಭ್ರಷ್ಟಾಚಾರ:

ರಾಜ್ಯದ ವಿವಿದ ವಿ.ವಿ.ಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ಹೆಸರಿನಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಅಂಕಪಟ್ಟಿ, ಪ್ರಶ್ನೆ-ಉತ್ತರ ಪತ್ರಿಕೆ, ಇನ್ನಿತರ ಅಗತ್ಯಗಳನ್ನು ಮುದ್ರಿಸಲು ಸಂಡಿಕೇಟ್ ಸದಸ್ಯರ ಸಹಭಾಗಿತ್ವದ ಖಾಸಗಿ ಕಂಪನಿಗಳಿಗೆ ನಿಡಲಾಗುತ್ತಿದೆ. ರಾಜ್ಯದ ವಿ.ವಿ.ಗಳಿಗೆ ಬೇಕಾಗಿರುವ ಪುಸ್ತಕಗಳು, ಪ್ರಶ್ನೆಪತ್ರಿಕೆ, ಇನ್ನಿತರೆ ಸಾಮಗ್ರಿಗಳನ್ನು ಬೆಂಗಳೂರು, ಮೈಸೂರಿನಲ್ಲಿರುವ ಸಂಘ ಪರಿವಾರದ ಶಾರದ ವಿಕಾಸ ಟ್ರಸ್ಟ್, ರಾಷ್ಟ್ರೋತ್ಥಾನ, ಪುಂಗವ ಪ್ರಕಾಶನದಲ್ಲಿ ಮುದ್ರಿಸಲಾಗುತ್ತಿದ್ದು, ಕೋಟಿ-ಕೋಟಿ ಅವ್ಯವಹಾರ ನಡೆಯುತ್ತಿದೆ. ದಾವಣಗೆರೆ, ಶಿವಮೊಗ್ಗ, ತುಮಕೂರು, ಬೆಂಗಳೂರು ವಿ.ವಿ.ಗಳಲ್ಲಿ ನೂರಾರು ಕೋಟಿ ರೂ.ಗಳ ಭ್ರಷ್ಟಾಚಾರ ನಡೆದು ತನಿಖಾ ವರದಿಗಳು ಬಹಿರಂಗಗೊಂಡಿದ್ದರೂ ತಪ್ಪಿತಸ್ಥರ ಮೇಲೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಲು ಮುಂದಾಗುತ್ತಿಲ್ಲ. ಈ ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಂಘ ಪರಿವಾರದವರ ಕೈವಾಡವಿದೆ.

ಸಂಘ ಪರಿವಾರಿಗಳು ಗೂಂಡಾಗಿರಿಗೆ ಮುಂದಾಗಿದ್ದಾರೆ:

ಬೌದ್ಧಿಕ ವಲಯ ಶಿಕ್ಷಣ ಕ್ಷೇತ್ರವನ್ನು ತನ್ನ ಕಪಿಮುಷ್ಠಿಯಲ್ಲಿ ತೆಗೆದುಕೊಳ್ಳಲು ಮುಂದಾಗಿರುವ ಸಂಘ ಪರಿವಾರ, ಅದಕ್ಕೆ ಗೂಂಡಾಗಿರಿಯಂತಹ ಹೀನಕೃತ್ಯಕ್ಕೂ ಇಳಿಯುತ್ತಿದೆ. ಹಿಂದೆ ವಿಜಾಪುರ ಮಹಿಳಾ ವಿ.ವಿ.ಯ ಕುಲಪತಿ ಡಾ.ಸೈಯದ್ ಅಕ್ತರ್ ಮೇಲೆ ಎಬಿವಿಪಿ ಯವರು ಹಲ್ಲೆ ಪ್ರಕರಣ ನಡೆದಿದೆ. ಇತ್ತೀಚಿಗೆ ಬೆಂಗಳೂರು ವಿ.ವಿ.ಕುಲಪತಿ ಡಾ. ಪ್ರಭುದೇವ್ ಅವರ ಮೇಲೆ ಎಬಿವಿಪಿ ಕಾರ್ಯಕರ್ತರು ದೈಹಿಕ ಹಲ್ಲೆಗೆ ಮುಂದಾಗಿದ್ದಾರೆ, ಕುಲಪತಿಯವರು "ನಾನು ಪೊಲೀಸ್ ರಕ್ಷಣೆ ಇಲ್ಲದೆ ವಿ.ವಿ.ಗೆ ಹೋಗಲಾರೆ" ಎನ್ನುತ್ತಿದ್ದಾರೆ. ಇನ್ನೊಂದೆಡೆ, ಬೆಂಗಳೂರು ವಿ.ವಿ.ಯ ದೂರ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ನಿರಂಜನ ರವರ ಮೇಲೆ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ ಮತ್ತಿತರರು ಹಲ್ಲೆ ಮಾಡಿ ಜೈಲಿಗೆ ಹೋಗಿ ಬಂದಿದ್ದಾರೆ. ಹೀಗೆ ದೈಹಿಕ ಹಲ್ಲೆಗೆ



ಮುಂದಾಗುವ ಮೂಲಕ ಸಂಘ ಪರಿವಾರವು ವಿ.ವಿ.ಗಳ ಶೈಕ್ಷಣಿಕ ವಾತಾವರಣವನ್ನು ಹಾಳು ಮಾಡಿ ಏಕಪಕ್ಷೀಯವಾಗಿ ತನ್ನ ಅಜೆಂಡಾವನ್ನು ತುರುಕಲು ಮುಂದಾಗುತ್ತಿದೆ. ವಿ.ವಿ.ಗಳಲ್ಲಿ ಅಧ್ಯಯನ ಮತ್ತು ಸಂಶೋಧನೆಗಳು ಕುಸಿಯುತ್ತಿವೆ. ಜಾತಿಯ ಹೆಸರಿನಲ್ಲಿ ವಿದ್ಯಾರ್ಥಿಗಳನ್ನು ಎತ್ತಿಕಟ್ಟುವ ವ್ಯವಸ್ಥಿತ ಹುನ್ನಾರ ನಡೆದಿದೆ. ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ಹೋರಾಟದ ಬದಲಾಗಿ, ಶಿಕ್ಷಣ ಸಂಸ್ಥೆಯ ಮುಖ್ಯಸ್ಥರ ಮೇಲೆ ದೈಹಿಕ ಹಲ್ಲೆಗೆ ಮುಂದಾಗುತ್ತಿರುವ ಎಬಿವಿಪಿ ಯ ಗೂಂಡಾಗಿರಿಗೆ ಸರ್ಕಾರವೇ ಬೆನ್ನೆಲುಬಾಗಿ ನಿಂತಂತಿದೆ.

ಚಿಂತಕ ಡಾ. ಟಿ.ಆರ್. ಚಂದ್ರಶೇಖರ ಅಮಾನತು:

ನಾಡಿನ ಪ್ರಗತಿಪರ ಚಿಂತಕ, ಹಂಪಿ ವಿ.ವಿ.ಯ ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಟಿ.ಆರ್. ಚಂದ್ರಶೇಖರ್ ರವರನ್ನು ವಿನಾಃಕಾರಣ ಅಮಾನತುಗೊಳಿಸಲಾಗಿದೆ. ರಾಯಚೂರು ಜಿಲ್ಲಾ ಪಂಚಾಯತ್ ಮತ್ತು ಯುನಿಸೆಫ್ ಸಂಸ್ಥೆಯ ಜೊತೆ ಜವಾಬ್ದಾರಿ ನಿರ್ವಹಿಸುವಲ್ಲಿನ ತಾಂತ್ರಿಕ ದೋಷವನ್ನೇ ದೊಡ್ಡದು ಮಾಡಿ, ಯಾವುದೇ ನೋಟಿಸ್ ನೀಡದೆ ಏಕಾಏಕಿ ಅಮಾನತುಗೊಳಿಸಿ ಆದೇಶ ನೀಡಿರುವುದು ಸಂಘ ಪರಿವಾರದ ಅಣತಿಯಂತೆ ಕುಣಿಯುತ್ತಿರುವ ಹಂಪಿ ವಿ.ವಿ.ಸಿಂಡಿಕೇಟ್‌ನ ದುರಹಂಕಾರಕ್ಕೆ ಹಿಡಿದ ಕನ್ನಡಿಯಾಗಿದೆ. ಡಾ.ಟಿ.ಆರ್.ಸಿ. ಯವರು ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳನ್ನು ನಿರಂತರವಾಗಿ ವಿರೋಧಿಸುತ್ತಾ ಜನ ಚಳುವಳಿಗಳಲ್ಲಿ ಭಾಗವಹಿಸುವ ಮೂಲಕ, ದಿನಪತಿಕೆಗಳಲ್ಲಿ ಲೇಖನಗಳನ್ನು ಬರೆಯುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಾ ಬರುವ ರಾಜ್ಯದ ಬುದ್ಧಿಜೀವಿಗಳಲ್ಲಿ ಪ್ರಮುಖರಾಗಿದ್ದಾರೆ. ಹಿಂದೆ ರಾಜ್ಯಸರ್ಕಾರ ಹಂಪಿ ವಿ.ವಿ.ಯ 80 ಎಕರೆ ಭೂಮಿಯನ್ನು 'ಥೀಮ್ ಪಾರ್ಕ್' ಹೆಸರಿನಲ್ಲಿ ಸಂಘ ಪರಿವಾರಕ್ಕೆ ನೀಡಲು ಮುಂದಾಗಿದ್ದರ ವಿರುದ್ಧ ಎಸ್.ಎಫ್.ಐ. ಸೇರಿದಂತೆ ಪ್ರಗತಿಪರರ ನಡೆಸಿದ ಹೋರಾಟದ ಮುಂಚೂಣಿಯಲ್ಲಿದ್ದವರು ಟಿ.ಆರ್.ಸಿ. ಅಷ್ಟೇ ಅಲ್ಲದೆ, ಜಾತಿ-ಅಸ್ಪೃಶ್ಯತೆಯ ವಿರುದ್ಧ, ಕೋಮುವಾದದ ವಿರುದ್ಧ, ವಿಶ್ವ ಶಾಂತಿಗಾಗಿ, ಪ್ರಭುತ್ವದ ಧಮನಕಾರಿ ನೀತಿಗಳ ವಿರುದ್ಧ ಹೋರಾಟದಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡವರು. ಇವರನ್ನು ವ್ಯವಸ್ಥಿತ ಸಂಚಿನ ಮೂಲಕ ತುಳಿಯಲು ಹವಣಿಸುತ್ತಿದ್ದ ಸಂಘ ಪರಿವಾರ ಕುಂಟು ನೆಪ ಮಾಡಿಕೊಂಡು ಹಂಪಿ ವಿ.ವಿ.ಯ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಸೇವೆಯಿಂದ ವಜಾಗೊಳಿಸಲಾಗಿದೆ. ವಿ.ವಿ.ಯಲ್ಲಿ ಎಬಿವಿಪಿ, ಆರ್‌ಎಸ್‌ಎಸ್‌ನ ಹಿನ್ನೆಲೆಯ ಸಿಂಡಿಕೇಟ್ ಸದಸ್ಯರೇ ಹೆಚ್ಚಾಗಿರುವುದು ಇವರ ಅಮಾನತ್ತಿಗೆ ಮೂಲ ಕಾರಣ. ಪ್ರಗತಿಪರ ಚಿಂತನೆಯ ಪ್ರಾಧ್ಯಾಪಕರಿಗೆ ವಿನಾಃಕಾರಣ ಕಿರುಕುಳ ನೀಡುತ್ತಿರುವುದು ನಡೆಯುತ್ತಿದೆ. ಇದಕ್ಕೆ ರಾಜ್ಯ ಸರ್ಕಾರದ ಅಧಿಕೃತ ಬೆಂಬಲವಿದೆ.

ರಾಜ್ಯದ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದಾಗಿನಿಂದ ಸಂಘ ಪರಿವಾರದ ಕಪಿಮುಷ್ಠಿಗೆ ಒಪ್ಪಿಸುತ್ತಾ ಶಿಕ್ಷಣದ ಕೇಸರೀಕರಣಕ್ಕೆ ಮುಂದಾಗುತ್ತಿದೆ. ಅದಕ್ಕಾಗಿ ಆರ್.ಎಸ್.ಎಸ್. ಹಿನ್ನೆಲೆಯ ಶಿಕ್ಷಣ ಸಚಿವರು, ಅಧಿಕಾರಿಗಳನ್ನು ನೇಮಿಸಿದೆ. ಯಥೇಚ್ಚವಾಗಿ ಸರ್ಕಾರಿ ಯಂತ್ರ-ಹಣದ ದುರ್ಬಳಕೆಯಾಗುತ್ತಿದೆ. ವೈಜ್ಞಾನಿ, ವೈಚಾರಿಕ ಪ್ರಗತಿಪರ ಶಿಕ್ಷಣ ಮತ್ತು ಸೌಹಾರ್ದಯುತ ಶೈಕ್ಷಣಿಕ ವಾತಾವರಣಕ್ಕಾಗಿ ಬಲಿಷ್ಠ ಚಳುವಳಿಯ ಅಗತ್ಯವಿದೆ.

ಸಂಪಾದಕೀಯ

ಸಂಘ ಸಂತತಿಯ ಅನೈತಿಕ ತೇಪೆ

ರಾಜ್ಯದ ಬಿಜೆಪಿಯಲ್ಲಿ ಅಧಿಕಾರ ಸ್ಥಾನಕ್ಕಾಗಿ ಕಾದಾಡುತ್ತಿರುವ ಯಡಿಯೂರಪ್ಪ - ಅನಂತಕುಮಾರರ ಈ ಎರಡು ಬಣಗಳು ಕದನ ವಿರಾಮ ಘೋಷಿಸಿರುವುದು ಕೇವಲ ತಾತ್ಕಾಲಿಕವಷ್ಟೇ. ಮತ್ತೇ ತಮ್ಮನ್ನು ಮುಖ್ಯಮಂತ್ರಿಯನ್ನಾಗಿಸಬೇಕು ಎಂಬ ಬೇಡಿಕೆ ಈಡೇರದೇ ಹೋದಲ್ಲಿ ಬಹುಸಂಖ್ಯೆಯಲ್ಲಿ ಶಾಸಕರನ್ನು ಹೊರಗೊಯ್ದು ಪ್ರತ್ಯೇಕ ಪಕ್ಷವನ್ನು ಸಂಘಟಿಸಿ ಸರ್ಕಾರವನ್ನೇ ಬೀಳಿಸುವ ಬೆದರಿಕೆ ಒಡ್ಡಿದ ಯಡ್ಡಿಯೂರಪ್ಪನವರು ಆರ್.ಎಸ್.ಎಸ್.ನ ಉಪದೇಶಕ್ಕೆ ಮನಃ ಪರಿವರ್ತನೆ ಮಾಡಿಕೊಂಡಿದ್ದಾರೆಂದು ಭಾವಿಲಾದೀತೆ?, ಈ ಗುಂಪುನ್ನು ಮೂಲೆಗುಂಪು ಮಾಡಿ ಮೇಲುಗೈ ಸಾಧಿಸಿಯೇ ಸಿದ್ದವೆಂದು ಹಲವು ತಂತ್ರ - ಕುತಂತ್ರಗಳನ್ನು ಹೊಸೆಯುತ್ತಲೇ ಬಂದ ಅನಂತಕುಮಾರ್ ಈಶ್ವರಪ್ಪನವರ ಬಣವೂ ಕೂಡ ಒಂದಾಗಿ ಹೋಗುವರೆಂಬ ಮಾತು ನಂಬಲಸಾಧ್ಯ. ಇಡೀರಾಜ್ಯದಾದ್ಯಂತ ತಮ್ಮ ಬಲ ಕ್ರೋಡೀಕರಿಸಲು ತಮ್ಮದೇ ಹಲವಾರು ಸಂಘಟನಾ ಕಾರ್ಯಕ್ರಮ ರೂಪಿಸಿ ಇಳಿಯಲಿದ್ದ ಯಡಿಯೂರಪ್ಪನನ್ನು ತಡೆಯುವುದೇ ಈಗ ನಡೆಸಿದ ಆರ್.ಎಸ್.ಎಸ್. ಸಂಧಾನ ಫಲ. ಹೀಗೆ ಯಡಿಯೂರಪ್ಪನವರ ಬಣದ ತಂತ್ರಗಳನ್ನು ಅವರಂದು ಕೊಂಡಂತೆ ಜಾರಿಯಾಗದೇ ವಿಳಂಬವಾದಲ್ಲಿ ಕ್ರಮೇಣ ಯಡಿಯೂರಪ್ಪನವರ ಬಣ ದುರ್ಬಲವಾಗುವುದು ಎಂಬುದು ಹಲವರ ಲೆಕ್ಕಾಚಾರ.


ಇಲ್ಲಿ ಪ್ರಮುಖ ಪ್ರಶ್ನೆಯೆಂದರೆ ಬಿಜೆಪಿಯಲ್ಲಿನ ವಿವಿಧ ಬಣಗಳ ಕಿತ್ತಾಟಗಳಿಂದ ಪತನಗೊಳ್ಳುವ ಬಿಜೆಪಿ ಸರ್ಕಾರವನ್ನು ರಕ್ಷಿಸಲು ಆರೆಸ್ಸಸ್ ಧಾವಿಸಿದೆ. ತಾನು ಸಾಂಸ್ಕೃತಿಕ ಸಂಘಟನೆಯೆಂದ ರಾಜಕೀಯಕ್ಕೆ ತಮಗೂ ಸಂಬಂಧವಿಲ್ಲವೆಂದೂ ಹೇಳುತ್ತಿರುವ ಆರ್.ಎಸ್.ಎಸ್.ಗೆ ಆ ಅಸಹ್ಯಕರ ಪ್ರಸಂಗದಲ್ಲಿ ಖಳನಾಯಕನ ಪಾತ್ರದ ಅಗತ್ಯವಾದರೂ ಏನಿದೆ?. ಮೇಲಾಗಿ ಅಲ್ಲಿ ಯಾವ ಜನ ಹಿತವಿದೆ. .ಬಿಜೆಪಿಯೊಳಗೆ ನಡೆಯುತ್ತಿರುವ ಗುದ್ದಾಟದಲ್ಲಿ ಜನತೆಯ, ನಾಡಿನ ಯಾವುದೇ ಪ್ರಶ್ನೆಗಳಿಲ್ಲ. ಇಲ್ಲಿರುವುದು ಅಧಿಕಾರ ದಾಹ, ಮನಸೋ ಇಚ್ಛೆ ದೇಶದ ಪ್ರಾಕೃತಿಕ ಸಂಪನ್ಮೂಲಗಳನ್ನೂ, ಸಾರ್ವಜನಿಕ ಹಣವನ್ನು ಮತ್ತಷ್ಟೂ ಲೂಟಿ ಹೊಡೆಯುವ ದಾಹ , ಹಲವಾರು ಅಕ್ರಮ, ಹಗರಣಗಳಲ್ಲಿ ಸಿಕ್ಕಿಬಿದ್ದು, ಅಕ್ರಮ ಮಾರ್ಗಗಳಿಂದ ಪಾರಾಗಲು ಹವಣಿಸುತ್ತಿರುವ ಅತ್ಯಂತ ನೀಚತನದ ಜನದ್ರೋಹಿ ಹಿತಾಸಕ್ತಿಗಳೇ ಇಲ್ಲಿ ಪ್ರಧಾನವಾಗಿರುವಾಗ ಈ ಬಗ್ಗೆ ಏನೊಂದೂ ಚಕಾರವೆತ್ತದೇ 'ಕೂಡಿಹೋಗಿ' ಎಂದು ಬುದ್ದಿವಾದವನ್ನು ಸಂಘ ಕೇಂದ್ರ ಹೇಳಿದೆಯೆಂದರೆ ಅದರ ನೈತಿಕ, ಸಾಂಸ್ಕೃತಿಕ ಬದ್ಧತೆಯಾದರೂ ಏನು?. ಬಿಜೆಪಿ ಅಧಿಕಾರಕ್ಕೆ ಬಂದ ಆರಂಭದಿಂದಲೇ ಇಲ್ಲಿಯವರೆಗೂ ಸರ್ಕಾರದ ಅಧಿಕಾರ, ಸಂಪನ್ಮೂಲಗಳು ಮತ್ತು ಲೂಟಿಯಲ್ಲಿ ಪ್ರಧಾನ ಪಾಲು ಪಡೆಯುತ್ತ ಬಂದ ಸ್ವಯಂ ಸೇವೆಯ ಸಂಘಕ್ಕೇ ಅಂತಹ ನೈತಿಕತೆ ಬರುವುದಾದರೂ ಹೇಗೆ?. ಭ್ರಷ್ಟಾಚಾರದ ಹೊಲಸು ಪ್ರಕರಣಗಳು ಒಂದೊಂದಾಗಿ ಹೊರಬಂದು ತೀವ್ರ ವಿವಾದಗಳೆದ್ದಾಗ ತನಗೂ ಬಿಜೆಪಿಗೂ ಸಂಬಂಧವೇ ಇಲ್ಲ ಎಂದೆಲ್ಲಾ ಹೇಳಿಕೊಳ್ಳುತ್ತಿದ್ದ ಆರೆಸ್ಸೆಸ್ ಇದೀಗ ಇವರಿಗೆಲ್ಲಾ ಬೆದರಿಕೆ ಹಾಕಿ ಒಟ್ಟುಗೂಡಿಸಲು ಪ್ರಯತ್ನಿಸಿದ್ದಾದರೂ ಯಾವುದಕ್ಕೆ?. ಇವುಗಳಿಗೆ ಪ್ರಾಮಾಣಿಕವಾಗಿ ಉತ್ತರ ಅವರಲ್ಲಿ ಇಲ್ಲ ಎಂಬುದು ಗೊತ್ತಿರುವ ಸಂಗತಿಯೇ ಆಗಿದೆ. ಆದರೆ ಒಂದಂತೂ ನಿಜ, ಆರೆಸ್ಸೆಸ್ ಆರಂಭದಿಂದಲೂ ಇಡೀ ಸರ್ಕಾರವನ್ನೇ ನಿಯಂತ್ರಿಸುತ್ತಾ ಬಂದಿದೆ. ಸರ್ಕಾರದ ಪ್ರತಿ ವ್ಯವಹಾರದಲ್ಲಿಯೂ ಯಾವುದೇ ಸಂವಿಧಾನಿಕ ಬದ್ಧತೆ, ಉತ್ತರದಾಯಿತ್ವ ಇಲ್ಲದೇ, ಜನ ಚುನಾಯಿಸಿದ ಸರಕಾರದ ಹೆಗಲ ಮೇಲೆ ಕುಳಿತು ಅಧಿಕಾರ ಚಲಾಯಿಸುತ್ತಿರುವುದು ಪ್ರಜಾತಂತ್ರಕ್ಕೆ ಮಾರಕವಾಗಿದೆ. ಇದು ಫ್ಯಾಶಿಸ್ಟ್ ವರ್ತನೆಯಾಗಿದೆ.

ಹಲವಾರು ಕೋಮು ಗಲಭೆಗಳಲ್ಲಿ ಪ್ರಮುಖ ಪಾತ್ರ, ಪಾಕಿಸ್ತಾನದ ಧ್ವಜ ಹಾರಿಸಿ ದಂಗೆ ಎಬ್ಬಿಸುವ ದೇಶದ್ರೋಹಿ ಪ್ರಯತ್ನಗಳಂತ ಆರೋಪಗಳನ್ನು ಎದುರಿಸುತ್ತಿರುವ ಸಂಘಪರಿವಾರವೇ ಈ ಸರ್ಕಾರವನ್ನು ನಿಯಂತ್ರಿಸುವುದು, ರಾಜಕೀಯ ಪಕ್ಷದೊಳಗೆ ಕೈಹಾಕುವುದು ಮತ್ತು ಅದರಂತೆ ವಿದೇಯವಾಗಿ ಬಿಜೆಪಿ ನಡೆದುಕೊಳ್ಳುವುದು ಜಾತ್ಯಾತೀತತೆ, ಪ್ರಜಾಪ್ರಭುತ್ವದ ಮೌಲ್ಯಗಳಿಗೆ, ಸಂವಿಧಾನಕ್ಕೆ ಒಡ್ಡಿದ ಬೆದರಿಕೆಯೇ ಆಗಿದೆ.

ಈಗ ನಡೆದಿರುವ ಕಿತ್ತಾಟಗಳಲ್ಲಿ ಭೂ ಹಾಗೂ ಗಣಿ ಮಾಫಿಯಾಗಳದ್ದೇ ಪ್ರಧಾನ ಪಾತ್ರವಿದೆ. ಭಿಜೆಪಿಯೆಂದರೆ ಹಲವು ಪಕ್ಷಗಳಿವೆ, ಮುಖ್ಯವಾಗಿ ಪಕ್ಷದೊಳಗೆ ಮೂರು ಪಕ್ಷ.ಗಳು. ಇವು ಮೇಲುಗೈ ಸಾಧಿಸಲು ಸದಾ ಪ್ರಯತ್ನಿಸುತ್ತಲೇ ಬಂದಿವೆ. ಈ ಗುಂಪುಗಳು ನಡೆಸಿದ ಅಕ್ರಮಗಳನ್ನು ಮುಚ್ಚಿಕೊಳ್ಳಲು ಲೂಟಿ ಮುಂದುವರೆಸಲು ಅವುಗಳು ಅಧಿಕಾರಕ್ಕಾಗಿ ಹಂಬಲಿಸುತ್ತಲೇ ಬಂದಿವೆ. ಹೀಗಾಗಿ ಅವರೆಷ್ಟೇ ಒಂದಾಗಿದ್ದೇವೆಂದೂ, ಜಗಳವಾಡಿದ್ದಕ್ಕೆ ಕ್ಷಮಿಸಬೇಕೆಂದು ಸಾರ್ವಜನಿಕರಲ್ಲಿ ಯಾಚಿಸಿದರೂ ಅದು ಕಪಟ ನಾಟಕ ಎಂಬುದರಲ್ಲಿ ಅನುಮಾನವೇ ಇಲ್ಲ. ಈ ತಾತ್ಕಾಲಿಕ ತೇಪೆಗಳಿಂದ ರಾಜ್ಯದ ಜನತೆಗೆ ಚಿಕ್ಕಾಸಿನ ಪ್ರಯೋಜನವೂ ಇಲ್ಲ.. ಅಧಿಕಾರದಲ್ಲುಳಿಯುವ ಹಕ್ಕನ್ನೇ ಕಳೆದುಕೊಂಡಿರುವ ಇವರು ದುಷ್ಟ ಉದ್ದೇಶಗಳನ್ನಿಟ್ಟುಕೊಂಡು ಅಧಿಕಾರ ಮುಂದುವರಿಯುವುದು ಅಕ್ಷಮ್ಯ ಅಪರಾಧ.

ಭಗವದ್ಗೀತೆ ಭೋಧನೆ : ಗುಪ್ತ ಅಜೆಂಡಾದ ಜಾರಿಯತ್ತ......

ಭಗವದ್ಗೀತೆಯನ್ನು ಶಾಲಾ ಪಠ್ಯದ ಭಾಗವನ್ನಾಗಿಸಲು ಚರ್ಚಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸದಾನಂದಗೌಡರವರು ಸಂಘಪ್ರಣೀತ ಗೀತಾ ಅಭಿಯಾನದ ಸಮಾರೋಪದಲ್ಲಿ ಹೇಳಿದ್ದಾರೆ. ಚಾತುರ್ವರ್ಣ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ಗೀತೆಯ ಅಭಿಯಾನ ಶಾಲಾ ಕಾಲೇಜುಗಳಲ್ಲಿ ನಡೆಯ ಕೂಡದು ಎಂದು ನಡೆದ ರಾಜ್ಯದಾದ್ಯಂತ ತೀವ್ರ ಪ್ರತಿಭಟನೆಯನ್ನು ಸರಕಾರ ನಿರ್ಲಕ್ಷಿಸಿರುವುದು ಖಂಡನೀಯ. ಕೆಲವು ಅಧ್ಯಾಯಗಳನ್ನಷ್ಟೇ ಭೋದಿಸಲಾಗುವುದು ಎಂದು ಹೇಳುತ್ತಿದ್ದ ಸರಕಾರ ಇದೀಗ ಪಠ್ಯದಲ್ಲೇ ಅಳವಡಿಸುವುದು ಎಳೆಯ ಮಕ್ಕಳಲ್ಲಿ ಮತೀಯ ವಿಭಜನೆಯ ಒಡಕನ್ನು ಬೆಳೆಸುತ್ತದೆ. ವೈಜ್ಞಾನಿಕ ಮನೋಭಾವ, ಜಾತ್ಯತೀತತೆ, ಸಮಾನತೆಯ ಮೂಲಭೂತ ಸಂವಿಧಾನದ ಅಡಿಪಾಯಕ್ಕೆ ಅದು ಪ್ರಹಾರ ಮಾಡಲಿದೆ. ಸರಕಾರದ ಯಾವುದೇ ಶಾಲೆ - ಕಾಲೇಜು, ಸಂಸ್ಥೆಗಳಲ್ಲಿ -ಕಛೇರಿಗಳಲ್ಲಿ ಯಾವುದೇ ಧಾರ್ಮಿಕ ಭೋದನೆ, ಕಟ್ಟಳೆಗಳ ಸಾರ್ವಜನಿಕ ಆಚರಣೆ ಕೂಡದು ಎಂಬ ನಿರ್ದೇಶನವನ್ನೇ ಮುಖ್ಯಮಂತ್ರಿಗಳ ಮಾತುಗಳು ಗಾಳಿಗೆ ತೋರಿವೆ.



ಅಂದರೆ ಇಂತಹ ಪಠ್ಯ ಕ್ರಮದ ಅಳವಡಿಕೆಯ ನಿರ್ಧಾರವನ್ನು ಗುಪ್ತವಾಗಿರಿಸಿಕೊಂಡು, ಅಭಿಯಾನದ ಆರಂಭಿಕ ಪ್ರಚಾರ ನಡೆಸಿಯಾಯಿತು, ಇನ್ನು ಮುಂದಿನದು ಪಠ್ಯ, ಅದರ ನಂತರ..............? ಅಂದರೆ ಹಂತಹಂತವಾಗಿ ಗುಪ್ತ ಅಜೆಂಡಾದ ಜಾರಿ. ಇದನ್ನು ಒಪ್ಪಲಾದೀತೆ?

* * * * *

ಮಡೆಸ್ನಾನ, ಪಂಕ್ತಿ ಬೇದಗಳಿಗೆ ಪ್ರತಿರೋಧದ ಹೆಜ್ಜೆಗಳು

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಆಚರಣೆಯಲ್ಲಿರುವ ಜಾತಿಭೇದ, ಮೌಢ್ಯತೆಯ ಮಡ ಮಡೆಸ್ನಾನದ ನಿಷೇಧ ಕುರಿತಂತೆ ತೀವ್ರತರ ಚರ್ಚೆ ಪ್ರತಿಭಟನೆಗಳು ನಡೆಯುತ್ತಿವೆ. ಇದೇ 7 ಮತ್ತು 8 ರಂದು ಬೆಂಗಳೂರಿನಲ್ಲಿ ನಿಡುಮಾಮಿಡಿ ಮಠದ ಮಾನವ ಧರ್ಮ ಪೀಠವು ನಡೆಸಿದ ಮಡೆಸ್ನಾನವನ್ನು ವಿರೋಧಿಸಿ ಧರ್ಮ ಪ್ರಮುಖರ ಸಮಾವೇಶ ಮತ್ತು ಸಂವಾದ ಅತ್ಯಂತ ಗಮನಾರ್ಹವಾಯಿತು. ವೀರಶೈವ, ಒಕ್ಕಲಿಗ ಮುಂತಾದ ವಿವಿಧ ಸಮುದಾಯಗಳ ಮಠಾಧೀಶರು ಪಾಲ್ಗೊಂಡು ಮಡೆಸ್ನಾನದಂತಹ ಜಾತಿಭೇದದ, ಅಮಾನವೀಯ ಪದ್ಧತಿಯ ವಿರುದ್ಧ ವೈಚಾರಿಕ ಪ್ರತಿಭಟನೆ ತೋರಿದರು. ವಿಶೇಷವಾಗಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಗದುಗಿನ ತೋಂಟದ ಶ್ರೀಗಳು ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಒಕ್ಕಲಿಗ ಮಹಾಸಂಸ್ಥಾನದ ಚಂದ್ರಶೇಖರ ಸ್ವಾಮಿಜಿ, ಪಂಚಮಸಾಲಿ ಪೀಠದ ಶ್ರೀಗಳು........ ಹೀಗೆ ಅಲ್ಲಿ ಅಣಿನೆರೆದದ್ದು, ವೈಚಾರಿಕ ಸಂಘರ್ಷ ಸಾರಿದ್ದು ವಿಶೇಷ.

ಹಾಗೆಯೇ ಇನ್ನಷ್ಟು ವಿಶೇಷವಿದ್ದದ್ದು ನಿಡುಮಾಮಿಡಿ ಸ್ವಾಮಿಜಿಗಳ ಆಹ್ವಾನವನ್ನು ಪೇಜಾವರ ಶ್ರೀಗಳು ಒಪ್ಪಿಬಂದದ್ದು - ಮರುದಿನ ಸಂವಾದ ನಡೆಸಿದ್ದು, ಇಲ್ಲಿಯೂ ಪೇಜಾವರರು ಎಂದಿನಂತೆ ಒಳಗೊಂದು,ಹೊರಗೊಂದು ಮಾತುಗಳನ್ನೇ ಆಡಿದರು. ಹೀಗೇಕೆಂದರೆ ತಾವು ದ್ವೈತವಾದಿಗಳು ಅದಕ್ಕೆ ನಮ್ಮ ಮಾತು ಹೀಗೆಲ್ಲ ದ್ವಂದ್ವವಾಗಿ ಕಾಣಿಸುವುದು ಎಂದರು. ಎಂಜಲೆಲೆಯ ಬದಲು ಅನ್ನಹಾಕಿ ಉರುಳಬಹುದೆಂದೂ, ಮಡೆಸ್ನಾನದ ಬಗ್ಗೆ (ಯಾವುದರ ಬಗ್ಗೆಯೇ - ನಿಲ್ಲಿಸಲೋ- ಪಾಲಿಸಲೋ,,) ಸರ್ಕಾರದ ಬಳಿ ಮಾತನಾಡುವುದಾಗಿಯೂ ಹೇಳಿದರು. ಅವರ ನಿಲುವು ಇಲ್ಲಿ ಅಸ್ಪಷ್ಟವಾಗಿತ್ತು. ಆದರೆ ಒಂದು ಹಂತದಲ್ಲಿ ದ್ವಂದಾಚಾರ್ಯರಿಂದ 'ಶಾಸ್ತ್ರಗಳಿಗಾಗಿ ಸಂವಿಧಾನವನ್ನು ಬಲಿಕೊಡಲು ಸಿದ್ಧನಿದ್ದೇನೆ' (ಕನ್ನಡಪ್ರಭ 9-1-2012) ಎಂದು ಒಳಗಿನ ಸತ್ಯ ಹೊರಹಾಕಿಯೇ ಬಿಟ್ಟರು. ಹಿಂದೂಗಳೆಲ್ಲಾ ಒಂದು ಎನ್ನುವ ಅವರ ಕೃಷ್ಣಮಠದಲ್ಲಿ ಪಂಕ್ತಿಭೇದ ನಿಲ್ಲಿಸಲು ನಿರಾಕರಿಸುವ ಅವರಿಂದ ಇಂತಹ ಮಾತುಗಳು ಬರದೇ ಅವರಾಡಿದ ಮಾತು ಸಂವಿಧಾನಕ್ಕೆ ಮಾನವೀಯತೆಗೆ ಘೋರ ಅಪಚಾರ.

ಅಂತೂ ಈ ಸಮಾವೇಶ ಸಂವಾದ ಏರ್ಪಡಿಸಿದ್ದು ಸ್ವಾಗತಾರ್ಹ. ಆಗಬೇಕಾದದ್ದು ಪ್ರಮುಖವಾಗಿ ಜನಜಾಗೃತಿ ಅದನ್ನು ಎಲ್ಲ ಪ್ರಗತಿಪರರು ಒಂದಾಗಿ ಕೊಂಡೊಯ್ಯಬೇಕು.

ಇಂತಹ ಪ್ರಯತ್ನಗಳು ಹಲವು ದಿಕ್ಕಿನಿಂದ ಆರಂಭಗೊಂಡಿದೆ. ಇದೇ ಜನವರಿ 26 ಗಣರಾಜ್ಯೋತ್ಸವದ ದಿನ ಸಂವಿಧಾನದ ಆಶಯಗಳ ರಕ್ಷಣೆಗಾಗಿ ಉಡುಪಿಯಲ್ಲಿ ಪಂಕ್ತಿಭೇದ ವಿರುದ್ಧ ರಾಜ್ಯಮಟ್ಟದ ಪ್ರತಿಭಟನೆ ಇದೆ. ಅಲ್ಲಿಗೆ ಎಲ್ಲರೂ ಬನ್ನಿ. ಎಚ್ಚರ. ಪ್ರತಿರೋಧದ ಶಕ್ತಿ ತೋರಬನ್ನಿ.

ಕಾರ್ಟೂನ್ ಕಾರ್ನರ್



ಕೃಪೆ :ಪ್ರಜಾವಾಣಿ

ಜ.26, 2012–ಗಣರಾಜ್ಯೋತ್ಸವ
ಉಡುಪಿ ಮಠಗಳಲ್ಲಿ ಪಂಕ್ತಿಬೇಧ–ಜಾತಿಬೇಧ ಆಚರಣೆಗಳ ವಿರುದ್ಧ

ಉಡುಪಿ ಶ್ರೀಕೃಷ್ಣ ಮಠದ ಬಳಿ ಪ್ರತಿಭಟನೆಗೆ ಕರೆ

ನಮ್ಮ ಸಮಾಜದಲ್ಲಿನ ಸಾಮಾಜಿಕ ಅನಿಷ್ಟಗಳು, ಜಾತೀಯತೆ, ಅಸ್ಪೃಶ್ಯತೆ, ತಾರತಮ್ಯಗಳ ವಿರುದ್ಧ ಹೋರಾಟಗಳನ್ನು ಹುರಿಗೊಳಿಸಬೇಕಾದ ಅಗತ್ಯ ಹಿಂದೆಂದಿಗಿಂತ ಈಗ ಹೆಚ್ಚಾಗಿದೆ. ಚಿಕ್ಕಬಳ್ಳಾಪುರದಲ್ಲಿ ನಡೆದ ಸಿಪಿಐ(ಎಂ) ಪಕ್ಷದ 20ನೇ ರಾಜ್ಯ ಸಮ್ಮೇಳನವು ಈ ಕೆಳಗಿನ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿದೆ.

ದೇವಾಲಯ ಮತ್ತು ಮಠಗಳಲ್ಲಿ ನಡೆಯುವ ಊಟದ ಸಮಯದಲ್ಲಿ ಬೇರೆ ಬೇರೆ ಜಾತಿಯವರಿಗೆ ವಿವಿಧ ಪಂಕ್ತಿ ಭೇದದ ಆಚರಣೆಗಳನ್ನು ನಡೆಸಲಾಗುತ್ತಿರುವುದರ ಬಗ್ಗೆ ಸಿಪಿಐ(ಎಂ) ರಾಜ್ಯ ಸಮ್ಮೇಳನ ತೀವ್ರವಾಗಿ ಆತಂಕ ವ್ಯಕ್ತಪಡಿಸುತ್ತದೆ. ಪಂಕ್ತಿಗಾಗಿ ಜನರನ್ನು ವಿಂಗಡಿಸಲು ಅವರ ಮೇಲಂಗಿಗಳನ್ನು ತೆಗೆದು ಹಾಕಿ ಬರಿ ಮೈಯಲ್ಲಿ ಊಟಕ್ಕೆ ಕುಳಿತುಕೊಳ್ಳಬೇಕು ಎನ್ನುವ ಕಟ್ಟಳೆಗಳ ಜೊತೆಯಲ್ಲಿ ಮುಂಜಿ, ಸಂಧ್ಯಾವಂದನೆ ಇತ್ಯಾದಿಗಳ ಬಗ್ಗೆ ಪ್ರಶ್ನೆಗಳನ್ನು ಎದುರಿಸಬೇಕು. ಅಕಸ್ಮಾತ್ ಗೊತ್ತಿಲ್ಲದೆ ಅಥವಾ ಜೊತೆಯವರ ಒತ್ತಾಯಕ್ಕೆ ಬ್ರಾಹ್ಮಣರ ಪಂಕ್ತಿಯಲ್ಲಿ ಕುಳಿತರೆ ಊಟದ ಮಧ್ಯೆಯೇ ಎಬ್ಬಿಸಿ ಹೊರಗೆ ಕಳಿಸುವ ಅವಮಾನವೀಯ ವರ್ತನೆ ದಿನನಿತ್ಯವೂ ಅನುಭವಿಸುವ ವೇದನೆ.


ಇತ್ತೀಚೆಗೆ ತಾನೆ ಉಡುಪಿಯ ಒಂದು ದೇವಾಲಯದಲ್ಲಿ ಗೌಡಸಾರಸ್ವತ ಬ್ರಾಹ್ಮಣ ಮಹಿಳೆಯೊಬ್ಬರನ್ನು ಅವಮಾನಕರವಾಗಿ ಊಟದ ಮಧ್ಯೆಯೇ ಎಬ್ಬಿಸಿ ಕಳುಹಿಸಿದ ಘಟನೆ ಬಗ್ಗೆ ಮಾಧ್ಯಮಗಳಲ್ಲಿ ಚರ್ಚೆಯಾಯಿತು. [ಹೀಗೆ ಬ್ರಾಹ್ಮಣರ ಒಳಗೂ ಕೂಡ ಮೇಲು ಕೀಳು ಭೇದದ ಆಚರಣೆಗಳನ್ನು ನೋಡುತ್ತೇವೆ] ಇನ್ನೂ ಬ್ರಾಹ್ಮಣ – ಬ್ರಾಹ್ಮಣೇತರ, ಬ್ರಾಹ್ಮಣೇತರರ ಮೇಲು ಜಾತಿಗಳು ದಲಿತರ ನಡುವಣ ಪಂಕ್ತಿಭೇದ ಮತ್ತಷ್ಟು ಗಡುಸಾಗಿರುತ್ತದೆ. ಉಡುಪಿ ಕೃಷ್ಣ ದೇವಾಲಯದಲ್ಲಂತೂ ಮಾಧ್ವ ಬ್ರಾಹ್ಮಣರು, ಮಾಧ್ವರಲ್ಲದ ಇತರ ಬ್ರಾಹ್ಮಣರು, ಅಧಿಕಾರಿಗಳು, ಮಂತ್ರಿಗಳಂತಹ ವಿಶೇಷ ಅತಿಥಿಗಳು ಜನ ಸಾಮಾನ್ಯರು ಎಂದು ನಾಲ್ಕು ಪಂಕ್ತಿಭೇದಗಳಿವೆ. ಇತ್ತೀಚೆಗೆ ಚರ್ಚೆಗೊಳಗಾದ ಮಡೆ–ಮಡೆಸ್ನಾನ ಈ ಪಂಕ್ತಿ ಭೇದದಿಂದಲೇ ಉದ್ಭವಿಸಿದ್ದು ಮತ್ತೊಂದು ಅಮಾನವೀಯ ಅಸಹ್ಯಕರ ಆಚರಣೆಯಾಗಿದೆ.



ಈ ಪಂಕ್ತಿಭೇದದ ಮೂಲವೇ ಮನುಷ್ಯ ಮನುಷ್ಯರ ನಡುವೆ ಭೇದವೆಣಿಸುವ ಕ್ರೂರ ಜಾತಿಪದ್ಧತಿ. ಭಾರತದಲ್ಲಿ ಬಹುಸಂಖ್ಯಾತ ಜನರಿಗೆ ಭೂಮಿಯ ಒಡೆತನವನ್ನು ನಿರಾಕರಿಸಲು ಆ ಮೂಲಕ ಜೀವನದ ಆಧಾರವನ್ನು ಕಿತ್ತುಕೊಂಡು ಅವರನ್ನು ಗೇಣಿ ರೈತರು ಜೀತದಾಳುಗಳನ್ನಾಗಿ ದುಡಿಸಿಕೊಳ್ಳಲು ಅಲ್ಪಸಂಖ್ಯಾತ, ಭೂಮಾಲಿಕ ಆಳುವವರ್ಗ – ರಾಜ, ಮಹಾರಾಜ, ಪಾಳೆಯಗಾರ ಮತ್ತು ಪುರೋಹಿತಶಾಹಿ ಸೃಷ್ಟಿಸಿದ ಜಾತಿ ಪದ್ಧತಿ ಎಂದು ಸಮ್ಮೇಳನ ವಿಶ್ಲೇಷಿಸಿದೆ.

'ಮನುಜ ಕುಲಂ ತಾನೊಂದೆ ವಲಂ' ಎಂದ ಕನ್ನಡದ ಆದಿಕವಿ ಪಂಪನಿಂದ ಆರಂಭವಾಗಿ ಇಲ್ಲಿಯವರೆಗೆ ಸಾಹಿತಿಗಳು, ಸಂತರು, ಸಾಂಸ್ಕೃತಿಕ ರಂಗದ ಪ್ರಮುಖರು ಜಾತಿ ಪದ್ಧತಿಯ ವಿರುದ್ಧ ಸಿಡಿದೆದ್ದಿದ್ದಾರೆ. ಉಡುಪಿ ಕೃಷ್ಣಮಠದ ಕನಕನ ಕಿಂಡಿಯ ಐತಿಹ್ಯವೇ ಇದಕ್ಕೊಂದು ಜಾತಿ ಪದ್ಧತಿಯ ವಿರುದ್ಧದ ಜ್ವಲಂತ ಉದಾಹರಣೆ "ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಬಲ್ಲಿರಾ, "ಆತ್ಮಯಾವ ಕುಲ, ಜೀವ ಯಾವ ಕುಲ, ಪಂಚೇಂದ್ರಿಯಗಳ ಕುಲ ಯಾವುದಯ್ಯಾ" ಎಂದು ಉಡುಪಿ ಕೃಷ್ಣನ ಪರಮಭಕ್ತ ಕನಕದಾಸರು ಐದು ಶತಮಾನಗಳ ಹಿಂದೆಯೇ ಪ್ರಶ್ನೆ ಎತ್ತಿದ್ದಾರೆ. ಆದರೆ ಅದೇ ಉಡುಪಿ ಕೃಷ್ಣ ದೇವಾಲಯದಲ್ಲಿ ಇನ್ನೂ ಜಾತಿಭೇದ, ಪಂಕ್ತಿ ಭೇದ ಆಚರಣೆಯಲ್ಲಿರುವುದು ಖಂಡನೀಯ ಭಾರತದ ಸಂವಿಧಾನ ಭಾರತದ ಎಲ್ಲ ಪ್ರಜೆಗಳು ಜಾತಿಭೇದ, ಲಿಂಗಭೇದ, ಮತಗಳ ಭೇದವಿಲ್ಲದೆ ಎಲ್ಲರೂ ಸಮಾನರೆಂದು ಸಾರಿ 63 ವರ್ಷಗಳಾದವು ಆದರೆ ಜಾತಿಭೇದದ ಆಚರಣೆಯಾದ ಪಂಕ್ತಿಬೇಧ ಈ ನಿರ್ದೇಶನವನ್ನು ಉಲ್ಲಂಘಿಸುತ್ತದೆ ಎಂದು ಸಮ್ಮೇಳನ ಅಭಿಪ್ರಾಯಪಟ್ಟಿದೆ.

ಉಡುಪಿಯ ಅಷ್ಟಮಠಗಳಲ್ಲೊಂದಾದ ಪೇಜಾವರ ಮಠದ ಶ್ರೀಗಳು ಹಿಂದುತ್ವದ ಪರಮಪ್ರತಿಪಾದಕರಾಗಿ, ವಿಶ್ವಹಿಂದೂ ಪರಿಷತ್ತಿನ ಮುಖಂಡರಾಗಿ ದಿನಂಪ್ರತಿ ಬೆಳಿಗ್ಗೆ ಹಿಂದು ನಾವೆಲ್ಲ ಒಂದು ಎಂದು ಉದ್ಘೋಷಿಸುತ್ತಾರೆ.



ದಲಿತಕೇರಿಗಳಿಗೆ ಪಾದಯಾತ್ರೆ ಮಾಡುತ್ತಾರೆ. ಆದರೆ ತಮ್ಮ ಮಠದಲ್ಲಿ ಹಾಗೂ ಕೃಷ್ಣನ ದೇವಾಲಯದಲ್ಲಿ ಜಾತಿಭೇದವನ್ನು ಆಚರಿಸುವುದು ಈ ಎಲ್ಲ ಮಾತುಗಳು, ನಡೆವಳಿಕೆಗಳು ಪೊಳ್ಳು ಎಂಬುದನ್ನು ಸೂಚಿಸುತ್ತವೆ. ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿ ವರ್ಣಾಶ್ರಮ ಭೇದವನ್ನು– ಜಾತಿ ಪದ್ಧತಿಯ ಆಚರಣೆಗಳಿಗೆ ಮತ್ತಷ್ಟು ಪ್ರೋತ್ಸಾಹ ಸಿಕ್ಕಿದಂತಾಗಿದೆ. ಭಗವದ್ಗೀತೆಯ ಅಭಿಯಾನಕ್ಕೆ ಸರ್ಕಾರದ ಬೆಂಬಲ ಹಾಗೂ ಅದನ್ನು ಶಾಲಾ ಪಠ್ಯ ಪುಸ್ತಕಗಳಲ್ಲಿ ಅಳವಡಿಸುವ ಪ್ರಯತ್ನ ಇದಕ್ಕೊಂದು ಉದಾಹರಣೆ.

ಜನರ ನಂಬಿಕೆಗಳು ದೇಶದ ಕಾನೂನು, ಮಾನವೀಯತೆಗಿಂತ ಹೆಚ್ಚಿನವು ಎಂದು ಬಿಜೆಪಿಯ ಮಂತ್ರಿಗಳು, ಇಂತಹ ಆಚರಣೆಗಳನ್ನು ಬೆಂಬಲಿಸಿ ತಮ್ಮ ಅಧಿಕಾರದ ಮೂಲವಾದ ಪ್ರಮಾಣ ವಚನವನ್ನು ಹಾಗೂ ಸಂವಿಧಾನವನ್ನು ಧಿಕ್ಕರಿಸಿ ಮಾತನಾಡುತ್ತಿದ್ದಾರೆ. ಇತ್ತೀಚೆಗೆ ಬೆಂಗಳೂರಿನ ಮಡೆ ಮಡೆ ಸ್ನಾನದ ಬಗೆಗಿನ ಸಂವಾದವೊಂದರಲ್ಲಿ ಪೇಜಾವರ ಶ್ರೀಗಳು ಸಂವಿಧಾನಕ್ಕಿಂತ ನಮ್ಮ ಶಾಸ್ತ್ರ ಶ್ರೇಷ್ಠ ಎನ್ನುವ ಶಾಸ್ತ್ರಾಂಧ ಮಾತುಗಳನ್ನು ಆಡಿದ್ದಾರೆ. ತನ್ಮೂಲಕ ಭಾರತವನ್ನು ಶತಮಾನಗಳ ಕಾಲ ಹಿಂದೂಡ ಬಯಸುತ್ತಾರೆ ಎಂದು ಸಮ್ಮೇಳನ ಅಭಿಪ್ರಾಯಪಟ್ಟಿದೆ.

ಉಡುಪಿ ಶ್ರೀ ಕೃಷ್ಣ ದೇವಾಲಯದ ಪಂಕ್ತಿಭೇದದ ಅಮಾನವೀಯತೆಯನ್ನು ಹಾಗೂ ಮನುಷ್ಯ, ಮನುಷ್ಯರಲ್ಲಿ ಭೇದವೆಣಿಸುವ ಆಚರಣೆಯನ್ನು ಸಿಪಿಐ(ಎಂ)ನ 20ನೇ ಕರ್ನಾಟಕ ರಾಜ್ಯ ಸಮ್ಮೇಳನ ತೀವ್ರವಾಗಿ ಖಂಡಿಸಿದೆ.

ಪೇಜಾವರಶ್ರೀಗಳು ಸಂವಿಧಾನಕ್ಕೆ ಎಸಗಿದ ಅಪಚಾರವನ್ನು ಪಂಕ್ತಿಭೇದವನ್ನಾಚರಿಸುತ್ತಾ ಅಸ್ಪೃಶ್ಯತೆಯ ವಿರುದ್ಧ ಮಾತಾನಾಡುವ ಹೊರಗೊಂದು ಒಳಗೊಂದು ಎನ್ನುವ ವರ್ತನೆಯನ್ನು ರಾಜ್ಯ ಸಮ್ಮೇಳನವು ಖಂಡಿಸುತ್ತದೆ.

ದೇಶದ ಸಂವಿಧಾನ ಜಾರಿಗೆ ಬಂದ ದಿನವಾದ ಗಣರಾಜ್ಯೋತ್ಸವದ ದಿನ 2012ರ ಜನವರಿ 26 ರಂದು ಶ್ರೀಕೃಷ್ಣ ದೇವಾಲಯದಲ್ಲಿ ಆಚರಣೆಯಲ್ಲಿರುವ ಪಂಕ್ತಿಬೇಧದ ವಿರುದ್ಧ ಜನ ಜಾಗೃತಿ ಹಾಗೂ ಬೃಹತ್ ಪ್ರತಿಭಟನೆಯನ್ನು ಸಂಘಟಿಸಬೇಕೆಂದು ಸಿಪಿಐ(ಎಂ)ನ 20ನೇ ರಾಜ್ಯ ಸಮ್ಮೇಳನವು ಕರೆ ನೀಡಿದೆ.

ಕೃಷ್ಣ ದೇವಾಲಯವಲ್ಲದೆ ರಾಜ್ಯ ಸರ್ಕಾರದ ಒಡೆತನದಲ್ಲಿರುವ 250ಕ್ಕೂ ಹೆಚ್ಚು ದೇವಾಲಯಗಳಲ್ಲಿ ಪಂಕ್ತಿ ಬೇಧವಿದೆ. ವಿವಿಧ ಜಾತಿ, ಪಂಗಡಗಳ ಅನೇಕ ಮಠಗಳಲ್ಲಿ ಕೂಡ ಪಂಕ್ತಿಬೇದದ ಆಚರಣೆಗಳಿವೆ. ಜಾತಿ ವ್ಯವಸ್ಥೆಯ ವಿಷ ಬೀಜದ ಫಲವಾದ ಪಂಕ್ತಿಬೇಧವನ್ನು ಎಲ್ಲಾ ದೇವಾಲಯ ಮಠಗಳಲ್ಲಿ ತೊಡೆದು ಹಾಕಬೇಕೆಂದು ಎಲ್ಲ ಜಾತಿಗಳ ಜನರ ಸಹಭೋಜನವನ್ನು ಆಚರಣೆಗೆ ತರಬೇಕೆಂದೂ ಸಿಪಿಐ(ಎಂ)ನ 20ನೇ ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ. ಉಡುಪಿ ಕೃಷ್ಣ ದೇವಾಲಯದ ಮುಂದೆ ಪಂಕ್ತಿ ಬೇಧದ ವಿರುದ್ಧ ಮಾಡುವ ಈ ಪ್ರತಿಭಟನೆಗೆ ಇಡೀ ರಾಜ್ಯಾದ್ಯಂತ ಇರುವ ಪಂಕ್ತಿಭೇದದ ಆಚರಣೆಯನ್ನು ತೊಲಗಿಸುವ ಹೋರಾಟಕ್ಕೆ ನಾಂದಿ ಕಹಳೆ ಎಂದು ಸಿಪಿಐ(ಎಂ) 20ನೇ ರಾಜ್ಯ ಸಮ್ಮೇಳನ ಘೋಷಿಸಿದೆ.

ಜನವರಿ 26ರಂದು ಉಡುಪಿ ಶ್ರೀ ಕೃಷ್ಣ ದೇವಾಲಯ ಸಂಕೀರ್ಣದ ಹೊರ ಆವರಣದಲ್ಲಿ ನಡೆಯಲಿರುವ ಈ ಪ್ರತಿಭಟನೆ ಜಾತಿಬೇಧ, ಪಂಕ್ತಿಭೇದವನ್ನು ವಿರೋಧಿಸುವ ಎಲ್ಲ ಪ್ರಗತಿಪರ ಸಂಘಟನೆ, ಶಕ್ತಿ, ವ್ಯಕ್ತಿಗಳು, ಪ್ರಗತಿಪರ ಮಠಾಧೀಶರರು ಬೆಂಬಲಿಸಬೇಕೆಂದು ಭಾಗವಹಿಸಬೇಕೆಂದು ಸಿಪಿಐ(ಎಂ) ರಾಜ್ಯ ಸಮ್ಮೇಳನ ಮನವಿ ಮಾಡಿದೆ.

ಮಂಡನೆಯನು ಕಾಂ. ಬಿ.ರಾಜಶೇಖರಮೂರ್ತಿ ಮಾಡಿದರು. ಅನುಮೋದನೆ **ಕಾಂ.ವೆಂಕಟೇಶ್ ಕೋಣಿ.** ಅನುಮೋದಿಸಿದರು. **ಇಡೀ ಸಮ್ಮೇಳನ ಒಕ್ಕೊರಲಿನಿಂದ ಅಂಗೀಕರಿಸಿ ಪೂರ್ಣ ಬೆಂಬಲ ವ್ಯಕ್ತಪಡಿಸಿತು.**

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

ಚುನಾವಣೆಗಳಲ್ಲಿನ ಯಶಸ್ಸುಗಳ ಆಧಾರದಲ್ಲಿ ಮಾತ್ರವೇ ರಾಜಕೀಯ ಪಕ್ಷದ ಸಾಧನೆಯನ್ನು ಅಳೆಯುವುದು ಬಂಡವಾಳಶಾಹಿ ರಾಜಕಾರಣದ ದೋಷಪೂರಿತ ದೃಷ್ಟಿಕೋನ. ಕರ್ನಾಟಕದ ಜನಜೀವನಕ್ಕೆ ನಾಡು ನುಡಿಗೆ ಕಮ್ಯುನಿಸ್ಟ್ ಚಳುವಳಿಯ ಕೊಡುಗೆ ಏನು ?

ಜಿ.ಎನ್.ನಾಗರಾಜ್

ಕಮ್ಯೂನಿಸ್ಟ್ ಚಳುವಳಿ ಮತ್ತು ಸಿಪಿಐ(ಎಂ) ಕರ್ನಾಟಕದ ರಾಜಕೀಯದಲ್ಲಿ ಇಂದು ಕೂಡ ಒಂದು ಉಪನದಿಯೇ. ಎಂದ ಮೇಲೆ ಸ್ವಾತಂತ್ರ್ಯ ಪೂರ್ವದಲ್ಲಿ ಅದು ಒಂದು ಕಿರುತೊರೆ ಮಾತ್ರ.

ಆದರೂ ಈ ಕಿರುತೊರೆ ತನ್ನ ಜನಪರ ಧೋರಣೆಯ ಸ್ಪಷ್ಟತೆ, ಆಧೋರಣೆಗೆ ಅನುಗುಣವಾಗಿ ಜನ ಚಳುವಳಿಗಳನ್ನು ರೂಪಿಸುವುದು ಈ ಧೋರಣೆ ಹಾಗೂ ಚಳುವಳಿಗಳ ಬಲದಿಂದ ಅಧಿಕಾರ ಬಲದಿಂದ ಜನಪರ ನೀತಿಗಳನ್ನು ಕಾಲಕೆಳಗೆ ತುಳಿಯಬೇಕೆನ್ನುವ ಆಳುವ ವರ್ಗ ಪಕ್ಷಗಳನ್ನು ಜನಪರವಾದ ಕೆಲವು ಧೋರಣೆಗಳನ್ನು ಒಪ್ಪಿಕೊಳ್ಳಲೇಬೇಕಾಗುವಂತೆ ಮಾಡುವುದು ಆ ಮೂಲಕ ತನ್ನ ಶಕ್ತಿ ಸಾಮರ್ಥ್ಯಕ್ಕೆ ಮೀರಿದ ಹಲವು ಸಾಧನೆಗಳನ್ನು ಮಾಡಲಾಗಿದೆ.


ಈ ಸಾಧನೆಗಳು ಕರ್ನಾಟಕದ ಭೂಪಟ ಹಾಗೂ ಚರಿತ್ರೆಯನ್ನೇ ಬದಲಾಯಿಸುವಷ್ಟು ಪ್ರಮುಖ ಸಾಧನೆಗಳು ಎನ್ನುವುದೇ ಕಮ್ಯೂನಿಸ್ಟ್ ಚಳುವಳಿಯ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹೆಚ್ಚುಗಾರಿಕೆಯಾಗಿದೆ.

ಮೈಸೂರು ಸಂಸ್ಥಾನ-ಜವಾಬ್ದಾರಿ ಸರ್ಕಾರ

ಕರ್ನಾಟಕದಲ್ಲಿ ಆಗ ತಾನೇ ಮೂಡಲಾರಂಭಿಸಿದ್ದ ಕಮ್ಯೂನಿಸ್ಟ್ ಸಂಗಾತಿಗಳು ಬೆಂಗಳೂರಿನಲ್ಲಿ 'ಜನಜಾಗೃತಿ ಸಂಘ'ವೆಂಬ ಚಿಕ್ಕ ಸಂಘವನ್ನು ಆರಂಭಿಸಿದರು. ಆ ಮೊದಲೇ ಸ್ವಾತಂತ್ರ್ಯ ಚಳುವಳಿಗೆ ಧುಮುಕಿ ಕಾಂಗ್ರೆಸ್ ಪಕ್ಷದಲ್ಲಿದ್ದ ಅವರು ಕಾಂಗ್ರೆಸ್‌ನೊಳಗಡೆಯೇ ಒಂದು ವಿಚಾರಶೀಲ ಗುಂಪಾಗಿ ಮುಂದುವರೆದರು. ಮೃದುಧೋರಣೆಯ, ಆಸ್ತಿವಂತ ವಕೀಲರೇ ಹೆಚ್ಚಾಗಿದ್ದ ಅಂದಿನ ಮೈಸೂರು ಸಂಸ್ಥಾನದ ಕಾಂಗ್ರೆಸ್‌ಗೆ ಒಂದು ಹರಿತವನ್ನೂ, ದೃಢತೆಯನ್ನು ನೀಡಿದರು.

ಮೈಸೂರು ಸಂಸ್ಥಾನದಲ್ಲಿ ಸಭೆ ನಡೆಸುವ, ಹೋರಾಟಗಳನ್ನು ಹಮ್ಮಿಕೊಳ್ಳುವ ಹಕ್ಕುಗಳನ್ನು ಇಲ್ಲಿನ ರಾಜರ ಆಡಳಿತ ನಿರ್ದಾಕ್ಷಿಣ್ಯವಾಗಿ ತುಳಿದ ಪ್ರಸಂಗಗಳಲ್ಲಿ ಸಿಡಿದ್ದೆದ್ದರು. ಅಂತಹ ಸಂದರ್ಭದಲ್ಲಿ ಜನರಲ್ಲಿ ಉಂಟಾಗಿದ್ದ ಅಸಮಾಧಾನವನ್ನು ಜನಚಳುವಳಿಯಾಗಿ, ಹರತಾಳ, ಬಂದ್‌ಗಳಾಗಿ ರೂಪಿಸಿದರು. ರಾಜರ ಆಡಳಿತಕ್ಕೆ ಬದಲಾಗಿ ಜವಾಬ್ದಾರಿ ಸರ್ಕಾರ ಬರಬೇಕು ಎನ್ನುವ ಜನರ ಭಾವನೆಗೆ ರೂಪುಕೊಟ್ಟರು. ಮೊಟ್ಟ ಮೊದಲು 'ಜವಾಬ್ದಾರಿ ಸರ್ಕಾರ'ವೆಂದರೇನು ಅದರ ಜವಾಬ್ದಾರಿ ಏನು, ಅದನ್ನು ಸಾಧಿಸುವುದು ಹೇಗೆ ಎಂಬ ಬಗೆ ಒಂದು ಕಿರುಪುಸ್ತಕವನ್ನು ಪ್ರಕಟಿಸಿದ್ದು ಕಮ್ಯೂನಿಸ್ಟರೇ. ಅದು ಅಂದಿನ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ನಾಯಕರ ಮೇಲೆ ಗಣನೀಯ ಪ್ರಭಾವ ಬೀರಿತು.

'ಶಿವಪುರ ಧ್ವಜ ಸತ್ಯಾಗ್ರಹ'ವೆಂದು ಹೆಸರಾದ ಶಿವಪುರದಲ್ಲಿ ಕಾಂಗ್ರೆಸ್ ಧ್ವಜವನ್ನು ಏರಿಸಿ ಬಂಧನಕ್ಕೊಳಗಾಗುವ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನಾಯಕರು ಹಿಂದು ಮುಂದು ನೋಡಲಾರಂಭಿಸಿದ ಸಮಯದಲ್ಲಿ ದಿಟ್ಟವಾದ ಹೋರಾಟಕ್ಕೆ ಕಾರ್ಯಕರ್ತರ ನಡುವೆ ಪ್ರಚಾರ ಮಾಡಿ, ಘೋಷಣೆ ನೀಡಿ ಹುರಿದುಂಬಿಸಿದ್ದು ಕಮ್ಯೂನಿಸ್ಟರೇ ಎಂಬುದು ಹೆಮ್ಮೆಯ ವಿಷಯ.



ರೈತ ಬಂಡಾಯದ ಸಂದರ್ಭದ ಖ್ಯಾತ ಕಲಾವಿದ ನಾ.ವೇವನ್‌ರವರಿಂದ ರೇಖಾಚಿತ್ರ

ಏಕೀಕರಣ :

ಹಾಗೆಯೇ ಕರ್ನಾಟಕ ಏಕೀಕರಣದ ಕೂಗು ನಾಡಿನೆಲ್ಲೆಡೆ ಎದ್ದರೂ ಕಾಂಗ್ರೆಸ್‌ನ ರಾಷ್ಟ್ರ ನಾಯಕತ್ವ-ನೆಹರೂ-ರಾಜೇಂದ್ರ ಪ್ರಸಾದ್-ವಲ್ಲಭ ಭಾಯಿ ಪಟೇಲ್ ಭಾರತದ ದೊಡ್ಡ ಬಂಡವಾಳಶಾಹಿಗಳ ಪ್ರಭಾವಕ್ಕೊಳಗಾಗಿ ತಾರಮಯ್ಯ ಆಡತೊಡಗಿದಾಗ ಕರ್ನಾಟಕದ ಕಾಂಗ್ರೆಸ್ ನಾಯಕರು ಹಿಮ್ಮೆಟ್ಟ ತೊಡಗಿದರು. ಆಗ ಕರ್ನಾಟಕದ ಏಕೀಕರಣದ ಬಗ್ಗೆ ದೃಢ ನಿಲುವು ತಳೆದು, ರಾಜ್ಯ ಕಾಂಗ್ರೆಸ್ ನಾಯಕತ್ವಕ್ಕೆ ಸೆಡ್ಡು ಹೊಡೆದು ಏಕೀಕರಣ ಪರ ಶಕ್ತಿಗಳನ್ನು ಕೆಲವು ಕಾಂಗ್ರೆಸ್ಸಿಗರನ್ನೂ ಸೇರಿಸಿಕೊಂಡು "ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು" ಎಂಬ ಸಂಘಟನೆಯನ್ನು ರೂಪಿಸಿ ಅಂದು ಎಲ್ಲೆಲ್ಲೂ ಕಾಂಗ್ರೆಸ್ ಎಂಬ ಪರಿಸ್ಥಿತಿಯಲ್ಲಿಯೂ ಕೆಲ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ಸನ್ನು ಸೋಲಿಸಿ ಮುಟ್ಟಿ ನೋಡಿಕೊಳ್ಳುವಂತೆ ಪೆಟ್ಟು ನೀಡಲು ಶ್ರಮಿಸಿತು. ಕಾಂಗ್ರೆಸ್ ವಿರುದ್ಧ ಜನ ಚಳುವಳಿಯನ್ನು ರೂಪಿಸಿ ಕಾಂಗ್ರೆಸ್ 'ರಾಜ್ಯ ನಾಯಕತ್ವ' ಏಕೀಕರಣಕ್ಕಾಗಿ ಪಟ್ಟು ಹಿಡಿಯುವಂತೆ ಮಾಡಿ ಕರ್ನಾಟಕ ರಾಜ್ಯ ರೂಪುಗೊಳ್ಳಲು ಕಾರಣವಾಯಿತು. ಅದೇ ಸಮಯದಲ್ಲಿ ನೆರೆಯ ಆಂಧ್ರ, ಕೇರಳಗಳಲ್ಲಿ ವಿಶಾಲಾಂಧ್ರ, ಐಕ್ಯ ಕೇರಳ ಚಳುವಳಿ ನೇತೃತ್ವವಹಿಸಿ ಭಾರತದ ಭೂಪಟವನ್ನೂ ಪುನರ್ ರೂಪಿಸಲು ಪ್ರಮುಖ ಪಾತ್ರ ವಹಿಸಿದ್ದು ಭಾರತದ ಕಮ್ಯೂನಿಸ್ಟ್ ಚಳುವಳಿಯೇ ಎಂಬುದನ್ನೂ ನೆನಪಿಸಿಕೊಳ್ಳಬೇಕು.

ಜೋಡಿದಾರಿ-ಇನಾಂದಾರಿ ರದ್ದತಿ, ಭೂಸುಧಾರಣೆ ಭೂಮಿ ಹಂಚಿಕೆ

ಭಾರತದೆಲ್ಲೆಡೆ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಭೂಸುಧಾರಣೆಗಾಗಿ ನಡೆಯುತ್ತಿದ್ದ ತೀವ್ರ ಚಳುವಳಿಯ ಜೊತೆಗೂಡಿ ಮೈಸೂರು ಸಂಸ್ಥಾನದಲ್ಲಿ ಕೋಲಾರ-ಬೆಂಗಳೂರು ಜಿಲ್ಲೆಗಳಲ್ಲಿ ಜೋಡಿದಾರಿ-ಇನಾಂದಾರಿ ಪದ್ಧತಿಯ ವಿರುದ್ಧ ಭೂಸುಧಾರಣೆಗಾಗಿ ದಕ್ಷಿಣ ಕನ್ನಡ, ಉಡುಪಿ, ಕೋಲಾರ, ಉತ್ತರ ಕನ್ನಡ, ಬಿಜಾಪುರ ಜಿಲ್ಲೆಗಳಲ್ಲಿ ಚಳುವಳಿ ರೂಪಿಸಿತು.

ಕರ್ನಾಟಕದ ಬಹುಕೀರ್ತಿತ ವಾದ ಕಾಗೋಡು ಸತ್ಯಾಗ್ರಹಕ್ಕೆ ಉತ್ತರ ಕನ್ನಡ ಜಿಲ್ಲೆಯಲ್ಲಿ ದಿನಕರ ದೇಸಾಯಿ-ಶ್ಯಾಮರಾವ್ ಪಿಕಳೆಯ ನೇತೃತ್ವದ ಕೆಂಬಾವುಟ ಗೇಣಿದಾರರ ಚಳುವಳಿಯ ಮೂಲಕ ಪ್ರೇರೇಪಣೆ ನೀಡಿದ್ದು ಕಮ್ಯೂನಿಸ್ಟ್ ಚಳುವಳಿಯೇ ಎಂಬುದನ್ನು ನೆನಪಿಸಿಕೊಳ್ಳಬೇಕು.

70ರ ದಶಕದಲ್ಲಿ ಸರ್ಕಾರಿ ಭೂಮಿ ಆಕ್ರಮಣ ಚಳುವಳಿಯನ್ನು ವ್ಯಾಪಕವಾಗಿ ನಡೆಸಿದ್ದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವೇ. 80 ರ ದಶಕದಲ್ಲಿ ಅಕ್ರಮ ಸಾಗುವಳಿ ಸಕ್ರಮಗೊಳಿಸಿ ಎಂಬ ಘೋಷಣೆಯ ಮೇಲೆ ಚಳುವಳಿ ಸಂಘಟಿಸಿ ದೊಡ್ಡ ಪ್ರಮಾಣದ ಭೂ ಹಂಚಿಕೆಗೆ ಕಾರಣವಾದದ್ದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವೇ.

ನರಗುಂದ-ನವಲಗುಂದ ರೈತ ಬಂಡಾಯ ಹಾಗೂ ಕರ್ನಾಟಕದಲ್ಲಿ ಪ್ರಥಮ ಕಾಂಗ್ರೆಸ್ಸೇತರ ಸರ್ಕಾರ

ಈಗಿನ ಗದಗ ಹಾಗೂ ಬೆಳಗಾಂ ಜಿಲ್ಲೆಯ ಮಲಪ್ರಭಾ ರೈತ ಚಳುವಳಿಯನ್ನು ಸಂಘಟಿಸಿ 4 ತಾಲ್ಲೂಕುಗಳಲ್ಲಿ ತೀವ್ರ ಚಳುವಳಿಗೆ ನೇತೃತ್ವ ನೀಡಿದ್ದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ನಾಯಕರೇ. ನಂತರ ಅದು ಇಡೀ ರಾಜ್ಯದಲ್ಲಿ ಹಲವಾರೆಡೆಗಳಲ್ಲಿ ರೈತ ಹೋರಾಟ ಚಿಮ್ಮಿ ಬರಲು ಕಾರಣವಾಯಿತು.

ಅದೇ ಸಮಯದಲ್ಲಿ ಬೆಂಗಳೂರಿನಲ್ಲಿ ಕಾರ್ಮಿಕ ಚಳುವಳಿ ಮುಖ್ಯವಾಗಿ ಸಾರ್ವಜನಿಕ ಉದ್ಯಮಗಳ ಕಾರ್ಮಿಕರ 71 ದಿನಗಳ ಮುಷ್ಕರ ಇಡೀ ಬೆಂಗಳೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶವನ್ನು ಕಾಂಗ್ರೆಸ್ ವಿರೋಧಿಯಾಗಿಸಿತು.

ರೈತ-ಕಾರ್ಮಿಕ ಚಳುವಳಿಗಳೆರಡನ್ನೂ ಬೆಸೆದು ಮಹಾ ಪ್ರತಿಭಟನೆಯೊಂದನ್ನು ಸಂಘಟಿಸಿದ ನಾಲ್ಕು ಪಕ್ಷಗಳ ರಂಗದಲ್ಲಿ ಮುಖ್ಯ ಪಾತ್ರವಹಿಸಿದ್ದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷಗಳೇ.

1983ರಲ್ಲಿ ಗುಂಡೂರಾವ್‌ರವರ ದಬ್ಬಾಳಿಕೆಯ ಸರ್ಕಾರವನ್ನು ಸೋಲಿಸಿದ್ದರಲ್ಲಿ ಈ ಚಳುವಳಿಗಳ ಕಾಣಿಕೆ ಮಹತ್ತರವಾದದ್ದು. ಹೀಗೆ ಕರ್ನಾಟಕದ ರಾಜಕೀಯದಲ್ಲಿ ಮತ್ತೊಂದು ಮಹತ್ತರ ತಿರುವಿಗೆ ಕಮ್ಯೂನಿಸ್ಟ್ ಚಳುವಳಿ ಕಾರಣವಾಯಿತು.

ಜಾಗತೀಕರಣ-ಕೋಮುವಾದದ ವಿರುದ್ಧ ಹೋರಾಟ :

ಜಾಗತೀಕರಣದ ವಿರುದ್ಧ ನಿರಂತರವಾಗಿ ಕರ್ನಾಟಕದಲ್ಲಿ ಎಚ್ಚರವನ್ನು ಮೂಡಿಸುತ್ತಿರುವುದು ಹಾಗೂ ದೃಢವಾಗಿ ಕಾರ್ಮಿಕ ರೈತ ಚಳುವಳಿಯನ್ನೂ, ಎಲ್ಲಾ ಜನಸಮುದಾಯದ ಚಳುವಳಿಯನ್ನು ರೂಪಿಸುವಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಪ್ರಧಾನ ಪಾತ್ರವಹಿಸಿದೆ. ಕೋಮುವಾದದ ಅಪಾಯದ ವಿರುದ್ಧವೂ ದೃಢವಾದ ಹೋರಾಟವನ್ನು ನಡೆಸುತ್ತಿರುವ ಏಕ ಮಾತ್ರ ರಾಜಕೀಯ ಪಕ್ಷ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ.

ಚಳುವಳಿಗಳು ಕರ್ನಾಟಕದ ಪ್ರಗತಿಪರ ಶಕ್ತಿಗಳ ನಡುವೆ ಪ್ರಭಾವ ಬೀರಿದೆ. ಜನತೆಯನ್ನು ಎಚ್ಚರಿಸಿವೆ. ಕರ್ನಾಟಕದ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಕನಿಷ್ಟ ಕೂಲಿ, ಬೆಲೆ ಏರಿಕೆ ವಿರುದ್ಧ, ಪಡಿತರ ವ್ಯವಸ್ಥೆಗಾಗಿ ನಿರಂತರ ಹೋರಾಟಗಳಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ನೇತೃತ್ವ ನೀಡುತ್ತಿದೆ.

ರಾಜಕೀಯವೆಂದರೆ ಜನರು ಅಸಹ್ಯ ಪಟ್ಟುಕೊಳ್ಳುವ ರೀತಿ ಭ್ರಷ್ಟಾಚಾರ, ಕುರ್ಚಿಗಾಗಿ ಕಿತ್ತಾಟ ನಡೆದಿರುವ ಸಮಯದಲ್ಲಿ ಕರ್ನಾಟಕದ ಮೂರು ಮುಖ್ಯ ರಾಜಕೀಯ ಪಕ್ಷಗಳಿಗಿಂತ ಭಿನ್ನವಾಗಿ ಪ್ರಾಮಾಣಿಕ, ಜನಪರ ರಾಜಕೀಯದ ಪರ್ಯಾಯಕ್ಕಾಗಿ ಸಿಪಿಐ(ಎಂ) ಶ್ರಮಿಸುತ್ತಿದೆ.

ಬೆಲೆ ಏರಿಕೆ ನಿಯಂತ್ರಣಕ್ಕಾಗಿ, ಗುತ್ತಿಗೆ ಪದ್ದತಿ ಶೋಷಣೆ ರದ್ದತಿಗಾಗಿ, ಕನಿಷ್ಟ ಕೂಲಿ ರೂ.10,000/-ಕ್ಕಾಗಿ, ಸರಕಾರಿ ಕಂಪನಿಗಳ ಖಾಸಗೀಕರಣ ಮುಂತಾದ ಜನವಿರೋಧಿ ನೀತಿಗಳನ್ನು ಖಂಡಿಸಿ ದಿನಾಂಕ 28-2-2012 ರಂದು ಇಡೀ ದೇಶಾದ್ಯಂತ ಕಾರ್ಮಿಕರ ಐಕ್ಯ ಕಾರ್ಯಾಚರಣೆ ನಡೆಯಲಿದೆ.

ದೇಶವ್ಯಾಪಿ ಕಾರ್ಮಿಕರ ಐಕ್ಯ ಮುಷ್ಕರ

ದೇಶದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಈ ಕಾಲಾವಧಿಯಲ್ಲಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಒಂದೇ ವೇದಿಕೆಗೆ ಬಂದಿರುವುದು ಅತ್ಯಂತ ವಿಶಾಲವಾದ ಕಾರ್ಮಿಕರ ಐಕ್ಯತೆಗೆ ನಾಂದಿ ಹಾಡಿದೆ. ಇಂತಹ ವಿಶಾಲ ಕಾರ್ಮಿಕ ವರ್ಗದ ಐಕ್ಯತೆಯನ್ನು ಸಿಪಿಐ(ಎಂ) ಸ್ವಾಗತಿಸುತ್ತದೆ. ವಿಭಿನ್ನವಾದ ಸೈದ್ಧಾಂತಿಕ, ರಾಜಕೀಯ ಧೋರಣೆಗಳನ್ನು ಹೊಂದಿದ್ದರೂ, ವಿಭಿನ್ನವಾದ ಬಣ್ಣಗಳ ಬಾವುಟಗಳನ್ನು ಹಿಡಿದಿದ್ದರೂ ಕಾರ್ಮಿಕರ ಹಿತ ಒಂದೇ ಎನ್ನುವ ದಿಶೆಯಲ್ಲಿ 11 ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಐಎನ್‌ಟಿಯುಸಿ, ಬಿಎಂಎಸ್, ಎಐಟಿಯುಸಿ, ಹೆಚ್‌ಎಂಎಸ್, ಎಲ್‌ಪಿಎಫ್, ಟಿಯುಸಿಸಿ, ಎಐಸಿಸಿಟಿಯು, ಎಐಯುಟಿಯುಸಿ, ಯುಟಿಯುಸಿ ಮತ್ತು ಸೇವಾ ಸಂಘಟನೆಗಳು ಒಂದಾಗಿ ಐಕ್ಯ ಕಾರ್ಮಿಕರ ಮುಷ್ಕರವನ್ನು ದಿನಾಂಕ 28-2-2012 ರಂದು ನಡೆಸಲು ಕರೆ ನೀಡಿವೆ. ಕಾರ್ಮಿಕ ವರ್ಗದ ಐತಿಹಾಸಿಕ ಐಕ್ಯತೆಯ ಈ ಮುಷ್ಕರವನ್ನು ಅತ್ಯಂತ ಯಶಸ್ವಿಗೊಳಿಸಲು, ಬೆಂಬಲಿಸಲು ಸಿಪಿಐ(ಎಂ) 20ನೇ ರಾಜ್ಯ ಸಮ್ಮೇಳನ ಕರೆ ನೀಡುತ್ತದೆ.

ಕಾರ್ಮಿಕ ವರ್ಗದ ಐಕ್ಯ ಹೋರಾಟದ ಕರೆಯಲ್ಲಿ 10 ಪ್ರಮುಖ ಬೇಡಿಕೆಗಳನ್ನು ರೂಪಿಸಲಾಗಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳು ದೇಶದ ಕಾರ್ಮಿಕರ ಹಾಗೂ ಜನ ಸಾಮಾನ್ಯರ ಹಿತದೃಷ್ಟಿಯಿಂದ ದುಡಿಯುವ ಜನರ ಪ್ರಮುಖ ಬೇಡಿಕೆಗಳ ಈಡೇರಿಕೆಗಾಗಿ ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿವೆ. ಆದರೆ ಸರಕಾರಗಳು ಬೆಲೆ ಏರಿಕೆ ನಿಯಂತ್ರಿಸಲು ಯಾವುದೇ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಕಾಳಜಿ ವಹಿಸುತ್ತಿಲ್ಲ. ಮತ್ತೊಂದೆಡೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತಷ್ಟು ತೀವ್ರಗೊಳ್ಳುವಂತೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಮಾಡಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ಬೆಲೆ ಏರಿಕೆ ನಿಯಂತ್ರಣಕ್ಕಾಗಿ ದೃಡವಾದ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಲಾಭದಾಯಕವಾಗಿರುವ ಕೇಂದ್ರ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಷೇರು ಬಂಡವಾಳವನ್ನು ಮಾರಾಟ ಮಾಡುವ ಮೂಲಕ ಈ ಒಂದು ವರ್ಷದಲ್ಲೇ 40000 ಕೋಟಿಗಳನ್ನು ಸಂಗ್ರಹಿಸಲು ಗುರಿ ಹೊಂದಿರುವುದು ಕಾರ್ಮಿಕರ ಹಾಗೂ ದೇಶದ ಹಿತಕ್ಕೆ ಮಾರಕವಾದ ಕ್ರಮಗಳಾಗಿವೆ. ಕಾರ್ಮಿಕ ಕಾನೂನು ಜಾರಿಗೊಳಿಸದೇ ಸಾಮಾಜಿಕ ಭದ್ರತೆಗೆ ಧಕ್ಕೆ ಉಂಟು ಮಾಡಲಾಗಿದೆ. ವರ್ಷವಿಡೀ ನಿರಂತರವಾಗಿ ಮಾಡಬೇಕಾದ ಖಾಯಂ ಕೆಲಸಗಳನ್ನು ಗುತ್ತಿಗೆ ಪದ್ಧತಿಯಲ್ಲಿ ನಿರ್ವಹಿಸುವ ಮೂಲಕ ಕಾರ್ಮಿಕರನ್ನು ತೀವ್ರ ಶೋಷಣೆಗೆ ಗುರಿ ಮಾಡಲಾಗುತ್ತಿದೆ. ಕನಿಷ್ಟ ವೇತನ, ಭವಿಷ್ಯನಿಧಿ, ಇಎಸ್‌ಐ, ಬೋನಸ್ ಮತ್ತು



ಗ್ರಾಚ್ಯುಟಿ ಸೌಲಭ್ಯಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು ನೇರವಾಗಿ ಗುತ್ತಿಗೆ ಪದ್ಧತಿಯಲ್ಲಿ ದುಡಿಸಿಕೊಳ್ಳುವ ಕಾರ್ಮಿಕರಿಗೂ ಒಳಗೊಂಡು ಸಾರ್ವಜನಿಕ ಕ್ಷೇತ್ರದ ಹಾಗೂ ಖಾಸಗಿ ರಂಗದ ಕೈಗಾರಿಕೆಗಳಲ್ಲಿಯೂ ಜಾರಿಗೊಳಿಸದೆ ನಿರಾಕರಿಸಲಾಗುತ್ತಿದೆ. ಉದ್ಯೋಗ ಸೃಷ್ಟಿಸಲು ಬೇಕಾದ ಯೋಜನೆಗಳನ್ನು ರೂಪಿಸಲಾಗುತ್ತಿಲ್ಲ. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಮಾಡಿದ ಕಾನೂನು ಜಾರಿಗೊಳಿಸಲು ಅಗತ್ಯ ಹಣಕಾಸು ಸಂಪನ್ಮೂಲವನ್ನು ಒದಗಿಸದೇ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕೇವಲ ಬೂಟಾಟಿಕೆಯಾಗಿದೆ. ಕಾರ್ಮಿಕರ ಸಂಘಟನಾ ಹಕ್ಕನ್ನೇ ಮೊಟಕು ಗೊಳಿಸಲು ಬಹುರಾಷ್ಟ್ರೀಯ ಕಂಪನಿಗಳು ಧಾಳಿ ನಡೆಸುತ್ತಿರುವಾಗ ಸರಕಾರಗಳು ಬಂಡವಾಳಗಾರರೊಂದಿಗೆ ಸಹಕರಿಸಿ ಕಾರ್ಮಿಕರ ಹಕ್ಕುಗಳ ಮೇಲೆ ಧಾಳಿ ನಡೆಸಲಾಗುತ್ತಿದೆ

ಈ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ದಿನಾಂಕ 8ನೇ ನವೆಂಬರ್ 2011 ರಂದು ದೇಶವ್ಯಾಪಿಯಾಗಿ ಬೃಹತ್ ಪ್ರಮಾಣದಲ್ಲಿ ಜೈಲ್ ಭರೋ/ಸತ್ಯಾಗ್ರಹ ನಡೆಸಲಾಗಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳು ಈಗಾಗಲೇ 5 ಪ್ರಮುಖ ಬೇಡಿಕೆಗಳನ್ನು 1.ಬೆಲೆ ಏರಿಕೆ ನಿಯಂತ್ರಣ 2. ಉದ್ಯೋಗ ಸೃಷ್ಟಿಸಲು ಹಾಗೂ ರಕ್ಷಿಸಲು ಪ್ಯಾಕೇಜ್ 3. ಕಾರ್ಮಿಕ ಕಾನೂನಗಳ ಕಠಿಣವಾದ ಅನುಷ್ಠಾನ 4 ಸಾರ್ವತ್ರಿಕವಾಗಿ ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಒದಗಿಸಲು ಹಣಕಾಸು ಸಂಪನ್ಮೂಲ ಒದಗಿಸುವ ಕ್ರಮಗಳು ಹಾಗೂ 5. ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಷೇರು ಮಾರಾಟ ಸಲ್ಲದು.

ಮೇಲಿನ ಪ್ರಮುಖ ಬೇಡಿಕೆಗಳ ಜೊತೆಗೆ ಕೆಳಗಿನ ಬೇಡಿಕೆಗಳ ಕುರಿತು ತುರ್ತು ಕ್ರಮಗಳನ್ನು ವಹಿಸಲು ಸರಕಾರವನ್ನು ಒತ್ತಾಯಿಸಲು ಕರೆ ನೀಡಲಾಗಿದೆ.

1. ಖಾಯಂ ಹಾಗೂ ನಿರಂತರ ಸ್ವರೂಪದ ಕೆಲಸಗಳನ್ನು ಗುತ್ತಿಗೆ ನೀಡದಂತೆ ಹಾಗೂ ಅಲ್ಲಿಂಯವರಿಗೆ ಕೈಗಾರಿಕೆ/ಸಂಸ್ಥೆಯಲ್ಲಿ ಖಾಯಂ ಕಾರ್ಮಿಕರಿಗೆ ನೀಡಲಾಗುವ ವೇತನ/ಸೌಲಭ್ಯಗಳ ದರದಲ್ಲಿಯೇ ಗುತ್ತಿಗೆ ಕಾರ್ಮಿಕರಿಗೂ ಸಿಗುವಂತೆ ಕ್ರಮ ವಹಿಸತಕ್ಕದ್ದು.
2. ಷೆಡ್ಯೂಲ್‌ಗಳ ವ್ಯತ್ಯಾಸವಿಲ್ಲದೆ, ಸೂಚ್ಯಂಕ ಆಧಾರಿತ ತಿಂಗಳಿಗೆ 10,000 ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಶಾಸನಬದ್ಧ ಕನಿಷ್ಟ ಕೂಲಿಯನ್ನು ನಿಗದಿಪಡಿಸಲು ಕನಿಷ್ಟ ಕೂಲಿ ಕಾಯಿದೆಯನ್ನು ತಿದ್ದುಪಡಿ ಮಾಡಿ ಅದರ ವ್ಯಾಪ್ತಿಯನ್ನು ಸಾರ್ವತ್ರಿಕಗೊಳಿಸತಕ್ಕದ್ದು.
3. ಬೋನಸ್, ಭವಿಷ್ಯನಿಧಿ ಪಾವತಿಗೆ ಇರುವ ಎಲ್ಲಾ ಮಿತಿ ಹಾಗೂ ಅರ್ಹತೆಗಳನ್ನು ತೆಗೆದು ಹಾಕಿ ಗ್ರಾಚ್ಯುಯಿಟಿ ಮೊತ್ತವನ್ನು ಏರಿಸತಕ್ಕದ್ದು.
4. ಎಲ್ಲರಿಗೂ ನಿವೃತ್ತಿ ವೇತನ ನೀಡತಕ್ಕದ್ದು.
5. 45 ದಿನಗಳ ಒಳಗಾಗಿ ಕಾರ್ಮಿಕ ಸಂಘಟನೆಗಳ ಕಡ್ಡಾಯ ನೊಂದಣಿ ಮತ್ತು ಐಎಲ್‌ಓನ 87 ಹಾಗೂ 98ನೇ ಗೊತ್ತುವಳಿಯನ್ನು ದೃಢೀಕರಿಸತಕ್ಕದ್ದು.
6. ಸರ್ಕಾರಿ ಯೋಜನೆಗಳು ಗೌರವಧನ ಆಧಾರದಲ್ಲಿ ಕೆಲಸ ಮಾಡುವ ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳ ನೌಕರರನ್ನು ಖಾಯಂಮಾಡಬೇಕು ಮತ್ತು ಅವರಿಗೆ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು.

ಕರ್ನಾಟಕ ರಾಜ್ಯದಲ್ಲೂ ಕೇಂದ್ರ ಕಾರ್ಮಿಕ ಸಂಘಟನೆಗಳು ಐತಿಹಾಸಿಕ ಐಕ್ಯತೆಯೊಂದಿಗೆ ನೀಡಿರುವ ರಾಷ್ಟ್ರೀಯ ಕರೆಯನ್ನು ಯಶಸ್ವಿಗೊಳಿಸಲು ಸಿಪಿಐ(ಎಂ) ಎಲ್ಲಾ ಶಾಖೆಗಳು, ಸಮಿತಿಗಳು ಕ್ರಿಯಾಶೀಲ ಪಾತ್ರವನ್ನು ವಹಿಸಲು ಹಾಗೂ ರಾಜ್ಯದ ಎಲ್ಲಾ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಲು ಮತ್ತು ಎಲ್ಲಾ ವಿಭಾಗದ ಜನತೆ ಬೆಂಬಲಿಸಬೇಕೆಂದು ಚಿಕ್ಕಬಳ್ಳಾಪುರದಲ್ಲಿ ದಿನಾಂಕ 8-11 ಜನವರಿ 2012 ರಂದು ಸೇರಿದ ಸಿಪಿಐ(ಎಂ) 20ನೇ ರಾಜ್ಯ ಸಮ್ಮೇಳನ ಕರೆ ನೀಡುತ್ತದೆ.

ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕೆಂಬ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿರುವ ಟಿ.ವಿ.ಚಾನಲ್‌ಗಳನ್ನು ನಿಯಂತ್ರಿಸಲು ಒತ್ತಾಯಿಸಿ ನಿರ್ಣಯ

ಅಂಧಶ್ರದ್ಧೆಗಳನ್ನು ಮತ್ತು ಮೌಢ್ಯಗಳನ್ನು ಬಿತ್ತುವ ಕಾರ್ಯಕ್ರಮಗಳನ್ನು ಟಿ.ವಿ.ಚಾನಲ್‌ಗಳು ಪ್ರತಿದಿನ ರಾತ್ರಿ ಮತ್ತು ಮುಂಜಾನೆ ಬಿತ್ತರಿಸುತ್ತೀವೆ. ಮೂಢನಂಬಿಕೆಗಳನ್ನು ಗಟ್ಟಿಗೊಳಿಸುವ ಕಾರ್ಯಕ್ರಮಗಳು ಹೆಚ್ಚಾಗುತ್ತಿವೆ. "ಹೀಗೂಉಂಟೆ', 'ವಿಸ್ಮಯ', ಜ್ಯೋತಿಷ್ಯ' ಬ್ರಹ್ಮಾಂಡ' ಮುಂತಾದ ಕಾರ್ಯಕ್ರಮಗಳು ಹೆಚ್ಚಿನ ಟಿ.ಆರ್.ಪಿ.ನೀಡುತ್ತವೆ ಎಂಬ ನೆಪ ಒಡ್ಡಿ ಟಿ.ವಿ.ಚಾನಲ್‌ಗಳು ಕಾರ್ಯಕ್ರಮಗಳನ್ನು ನಿರಂತರವಾಗಿ ಪ್ರಸಾರ ಮಾಡುತ್ತಿವೆ.

ನಾಗರಿಕರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದರ ಮೂಲಕ ಅವರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ ಸರ್ಕಾರಗಳು ಶ್ರಮಿಸಬೇಕು ಎನ್ನುವುದು ನಮ್ಮ ದೇಶದ ಸಂವಿಧಾನದ ಆಶಯ. ಈ ಆಶಯದ ವಿರುದ್ಧವಾಗಿ ಟಿ.ವಿ.ಚಾನಲ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಇಂತಹ ಟಿ.ವಿ.ಚಾನಲ್‌ಗಳ ಮೇಲೆ ಸೆನ್ಸಾರ್ ಮಂಡಳಿಗಳು ನಿಯಂತ್ರಣ ಹೇರಲು ಸಾಧ್ಯವಾಗಬೇಕು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಆ ನಿಟ್ಟಿನಲ್ಲಿ ಗಂಭೀರ ಕ್ರಮ ಕೈಗೊಳ್ಳಬೇಕೆಂದು ಚಿಕ್ಕಬಳ್ಳಾಪುರದಲ್ಲಿ ನಡೆಯುತ್ತಿರುವ ಸಿಪಿಐ(ಎಂ)ನ ಕರ್ನಾಟಕ ರಾಜ್ಯದ 20ನೇ ಸಮ್ಮೇಳನ ಒಕ್ಕೊರಲಿನಿಂದ ಒತ್ತಾಯಿಸುತ್ತದೆ.

ಮಾಧ್ಯಮಗಳು ಜನಮಾನಸದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ದಿಕ್ಕಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಕೂಡ ಸಿಪಿಐ(ಎಂ) ರಾಜ್ಯ ಸಮ್ಮೇಳನ ಆಗ್ರಹಿಸುತ್ತದೆ.

ಪ್ರಧಾನ ಮಂತ್ರಿಗಳು ಭಾರತದ ನಿರಾಶಾದಾಯಕ ಭವಿಷ್ಯವನ್ನು ಬದಲಿಸಬೇಕು ಎಂದು ನಿಜವಾಗಿಯೂ ಗಂಭೀರವಾಗಿ ಯೋಚಿಸುತ್ತಿದ್ದರೆ, ಎರಡು ಭಾರತಗಳ ನಡುವಿನ ಕಂದರವನ್ನು ಹೆಚ್ಚಿಸುವ ಈಗಿನ ದಿಕ್ಕನ್ನು ಕೈಬಿಡಬೇಕಾಗಿದೆ ಮತ್ತು ಶ್ರೀಮಂತರಿಗೆ ರಿಯಾಯ್ತಿಗಳಾಗಿ ಕೊಟ್ಟ ಹಣವನ್ನು ನಮ್ಮ ಬಹು ಆವಶ್ಯಕವಾದ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಾಗಿ, ಆಮೂಲಕ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಉಂಟು ಮಾಡಲು ಬಳಸಬೇಕು. ಇದೀಗ ನಮ್ಮ ಜನಗಳ ಜೀವನಾಧಾರಗಳನ್ನು, ಅವರ ಸ್ಥಾನಮಾನಗಳನ್ನು, ಅದಕ್ಕಾಗಿ ಅವರ ಆರೋಗ್ಯವನ್ನು ಉತ್ತಮ ಪಡಿಸಲು, ಒಂದು ಉತ್ತಮ ಭಾರತವನ್ನು ಕಟ್ಟಲು ಇರುವ ಏಕೈಕ ಮಾರ್ಗ

ಪ್ರಧಾನಿಗಳ ಹೆಗ್ಗಳಿಕೆಗಳನ್ನು ಹುಸಿಗೊಳಿಸಿರುವ ಹಸಿವು, ಅಪೌಷ್ಟಿಕತೆಯ ತಾಂಡವ

'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಜನವರಿ 17, 2012 ರ ಸಂಚಿಕೆಯ ಸಂಪಾದಕೀಯ

'ಅಪೌಷ್ಟಿಕತೆಯು ಸಮಸ್ಯೆ ರಾಷ್ಟ್ರೀಯ ಅವಮಾನದ ಸಂಗತಿ' ಎಂದಿದ್ದಾರೆ ನಮ್ಮ ಪ್ರಧಾನ ಮಂತ್ರಿಗಳು. ಹಸಿವು ಮತ್ತು ಅಪೌಷ್ಟಿಕತೆ ಕುರಿತ ಒಂದು ವರದಿಯನ್ನು ಬಿಡುಗಡೆ ಮಾಡುತ್ತ ಅವರು ಉದ್ಗರಿಸಿರುವ ಮಾತಿದು. ಕೆಲವು ಸರ್ಕಾರೇತರ ಸಂಘಟನೆಗಳು ಮತ್ತು ಕಾರ್ಪೊರೇಟುಗಳು ನಡೆಸಿರುವ ಸರ್ವೆಯ ಈ ವರದಿಗೆ ಅವರು ಇಟ್ಟಿರುವ ಹೆಸರು 'ಹಂಗಾಮ' (ಹಸಿವು ಮತ್ತು ಅಪೌಷ್ಟಿಕತೆಗೆ ಇಂಗ್ಲಿಷ್ ಸಮಾನಾರ್ಥಕ ಪದಗಳಾದ 'ಹಂಗರ್' ಮತ್ತು 'ಮಾಲ್‌ನ್ಯುಟ್ರಿಶನ್' ಪದಗಳನ್ನು ಸೇರಿಸಿದ ಪದ).

ನಿಜಕ್ಕೂ ಇದು ರಾಷ್ಟ್ರೀಯ ಅವಮಾನ. ಆದರೆ ಹೀಗೆ ಹೇಳುವಾಗ ಪ್ರಧಾನ ಮಂತ್ರಿಗಳು ಭಾರತ ಒಂದು 'ಮೂಡಿ ಬರುತ್ತಿರುವ ಆರ್ಥಿಕ' ಎಂಬ ಸ್ಥಾನಮಾನವನ್ನು ಸಾಧಿಸಿದೆ ಎಂಬ ಅವರ ಸರಕಾರದ ಆಡಂಬರದ ಮಾತುಗಳ ಬಗ್ಗೆಯಾಗಲೀ, ತಾನು ಆರಂಭಿಸಿದ ಆರ್ಥಿಕ ಸುಧಾರಣೆಗಳ ಇಪ್ಪತ್ತು ವರ್ಷಗಳ 'ಮಹಾ ಯಶಸ್ಸಿನ' ಭಾವೋನ್ಮಾದಗಳ ಬಗ್ಗೆಯಾಗಲೀ, ಇವು ತಂತಾನೇ ನಮ್ಮ ಜನತೆಯ ಜೀವನಾಧಾರಗಳನ್ನು ಉತ್ತಮ ಪಡಿಸುತ್ತವೆ ಎಂಬ ದಾವೆಗಳ ಬಗ್ಗೆಯಾಗಲೀ ಏನೂ ಹೇಳದೆ ಮೌನವಾಗಿದ್ದರು. ಇದು ನಿರೀಕ್ಷಿತವೇ.

ಅವರು ಬಿಡುಗಡೆ ಮಾಡಿದ ವರದಿ ನಮ್ಮ ದೇಶದ 5 ವರ್ಷಗಳಿಗಿಂತ ಕೆಳಗಿನ ವಯಸ್ಸಿನ ಮಕ್ಕಳಲ್ಲಿ 42ಶೇ. ಕನಿಷ್ಟ ತೂಕಕ್ಕಿಂತ ಕಡಿಮೆ ತೂಕ ಹೊಂದಿದ್ದಾರೆ, 59ಶೇ. ಮಕ್ಕಳ ಬೆಳವಣಿಗೆ ಕುಂಠಿತವಾಗಿದೆ ಎಂದು ತೋರಿಸುತ್ತದೆ. ಈ ಸರ್ವೆಯನ್ನು 2011ರಲ್ಲಿ 112 ಗ್ರಾಮೀಣ ಜಿಲ್ಲೆಗಳಲ್ಲಿ ನಡೆಸಲಾಯಿತು. ಭಾರತದ 20ಶೇ.ದಷ್ಟು ಮಕ್ಕಳನ್ನು ಈ ಸರ್ವೆ ಒಳಗೊಂಡಿತ್ತು. ಇವುಗಳಲ್ಲಿ ಒಂದು ನೂರು ಜಿಲ್ಲೆಗಳನ್ನು ಯುನಿಸೆಫ್(ವಿಶ್ವ ಸಂಸ್ಥೆಯ ಮಕ್ಕಳು ಮತ್ತು ಶಿಕ್ಷಣ ನಿಧಿ) 2009ರಲ್ಲಿ ರೂಪಿಸಿದ ಒಂದು ಮಕ್ಕಳ ಅಭಿವೃದ್ಧಿ ಸೂಚ್ಯಂಕದಲ್ಲಿ ಕೆಳಮಟ್ಟದಲ್ಲಿದ್ದ ಜಿಲ್ಲೆಗಳಿಂದ ಆರಿಸಲಾಗಿತ್ತು.

ಪ್ರಧಾನ ಮಂತ್ರಿಗಳೇನೋ ಇದು ದೇಶವನ್ನು ಚಕಿತಗೊಳಿಸುವ ಒಂದು ಸುದ್ದಿಯನ್ನು ಪ್ರಕಟಪಡಿಸುತ್ತಿದ್ದೇನೆ ಎಂಬಂತೆ ಮಾತಾಡಿದರು. ಆದರೆ ಇದರಲ್ಲಿ ಹೊಸತೇನೂ ಇರಲಿಲ್ಲ. ಮನಮೋಹನ ಸಿಂಗ್ ರವರು ಹಣಕಾಸು ಮಂತ್ರಿಯಾಗಿ ಆರಂಭಿಸಿದ ನವ-ಉದಾರವಾದಿ ಅರ್ಥಿಕ ಸುಧಾರಣೆಗಳು ಸಾಧಿಸಿರುವುದು ಅರ್ಥಿಕ ಕಂದರಗಳು ತೀಕ್ಷ್ಣವಾಗಿ ಹೆಚ್ಚುತ್ತಲೇ ಇರುವ ಎರಡು ಭಾರತಗಳನ್ನಷ್ಟೇ ಎಂಬುದನ್ನು ಈ ಸರ್ವೆಗಿಂತಲೂ ವ್ಯಾಪಕವಾದ ಅಧ್ಯಯನಗಳನ್ನು ನಡೆಸಿದ ಸರಕಾರದ ಸಂಸ್ಥೆಗಳ ವರದಿಗಳು ಈಗಾಗಲೇ ಸಾಬೀತು ಮಾಡಿವೆ.



ಕೃಪೆ :ಪ್ರಜಾವಾಣಿ

ಅಧಿಕೃತ ಸರಕಾರೀ ಸಂಸ್ಥೆಗಳ ಕೆಲವು ವರದಿಗಳನ್ನು ನೋಡೋಣ.

ಹಸಿವಿನ ಪ್ರಮಾಣ

ಬಡತನದ ಅಂಕೆ-ಸಂಖ್ಯೆಗಳಿಗೆ ಸಂಬಂಧಪಟ್ಟಂತೆ ವಿವಾದಗಳೇನೇ ಇರಲಿ, ಇತ್ತೀಚೆಗೆ ಯೋಜನಾ ಆಯೋಗ ಪ್ರಕಟಿಸಿದ ಮಾನವ ಅಭಿವೃದ್ಧಿ ವರದಿ ನಮ್ಮ ಸುಮಾರು 31 ಕೋಟಿ ಜನಗಳು ಅಧಿಕೃತವಾಗಿ ನಿರೂಪಿಸಿರುವ ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ ಎಂದು ಹೇಳಿದೆ. 1973-74ರಿಂದ ಈ ಸಂಖ್ಯೆಯಲ್ಲಿ ಆಗಿರುವ ಇಳಿಕೆ ಕೇವಲ 1.9 ಕೋಟಿ. ಬಡತನವನ್ನು ಅಳೆಯುವ ವಿಧಾನಗಳ ಬಹಳ ಅಸಮರ್ಪಕವಾಗಿವೆ ಎಂಬ ಸಂಗತಿಯನ್ನು ಪಕ್ಕಕ್ಕಿಟ್ಟರೂ ಪರಿಸ್ಥಿತಿ ಎಂತಹ ಮನೋವೇದಕವಾಗಿದೆ ಎಂಬುದನ್ನು 1983ರಿಂದ 2005ರ ನಡುವೆ ಕ್ಯಾಲೊರಿ ಮತ್ತು ಬೇಳೆ ಕಾಳುಗಳ(ಪ್ರೊಟೀನ್) ತಲಾಬಳಕೆ ಗ್ರಾಮೀಣ ಪ್ರದೇಶಗಳಲ್ಲಿ 8ಶೇ.ದಷ್ಟು ಮತ್ತು ನಗರ ಪ್ರದೇಶಗಳಲ್ಲಿ 3.3ಶೇ.ದಷ್ಟು ಇಳಿದಿದೆ ಎಂಬ ಅಂಕಿ-ಅಂಶ ತೋರಿಸುತ್ತದೆ. ದೇಶದಲ್ಲಿ ಹಸಿವಿನ ಪ್ರಮಾಣ ಎಷ್ಟಿದೆಯೆಂಬುದು 10ಕ್ಕಿಂತ ಕಡಿಮೆ ಹಸಿವಿನ ಸೂಚ್ಯಂಕವನ್ನು ದೇಶದಲ್ಲಿ ಯಾವ ರಾಜ್ಯವೂ ಹೊಂದಲಿಲ್ಲ ಎಂಬ ಸಂಗತಿಯಿಂದಲೇ ತಿಳಿಯುತ್ತದೆ.

ಭಾರತದ ಮೂರು ವರ್ಷಕ್ಕಿಂತ ಚಿಕ್ಕ ಮಕ್ಕಳಲ್ಲಿ ಅರ್ಧದಷ್ಟು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಇದು ಅತೀ ಬಡ ದೇಶಗಳೆನಿಸಿದ ಸಹಾರಾ ಮರುಭೂಮಿಯ ಕೆಳಗಿನ ಆಫ್ರಿಕನ್ ದೇಶಗಳಿಗಿಂತಲೂ ಕೆಟ್ಟ ಪರಿಸ್ಥಿತಿ. ಅರ್ಧದಷ್ಟು ಮಕ್ಕಳು ಪೂರ್ಣವಾಗಿ ರೋಗ ನಿರೋಧಕಗಳ ರಕ್ಷಣೆ ಪಡೆದಿಲ್ಲ. ಇದರಿಂದಾಗಿ ಸಂಪೂರ್ಣವಾಗಿ ತಡೆಯಲು ಸಾಧ್ಯವಿರುವ ರೋಗಗಳಿಗೆ ತುತ್ತಾಗಿ ಇಲ್ಲವಾಗುತ್ತಾರೆ. ಜನತೆಯ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಆರೋಗ್ಯಕ್ಕೆ ಮಾಡುವ ಖರ್ಚು(ಸಾರ್ವಜನಿಕ ಮತ್ತು ಖಾಸಗಿ ಎರಡೂ ಸೇರಿ) ದೇಶದ ಒಟ್ಟು ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ನೋಡಿದರೆ ಬಹಳ ಹಿಂದುಳಿದ ಪ್ರದೇಶವೆನಿಸಿಕೊಳ್ಳುವ ಆಫ್ರಿಕಾ ಖಂಡದ ದೇಶಗಳು ಮಾಡುವ ಖರ್ಚಿಗಿಂತಲೂ ಕಡಿಮೆ. 64 ವರ್ಷಗಳ ಸ್ವಾತಂತ್ರ್ಯದ ನಂತರವೂ ದೇಶದ ನೈರ್ಮಲ್ಯದ ಸ್ಥಿತಿ-ಗತಿ ಅತ್ಯಂತ ಅಸಮರ್ಪಕವಾಗಿದೆ. ಸುಮಾರು ಅರ್ಧದಷ್ಟು ಕುಟುಂಬಗಳಿಗೆ ಶೌಚಾಲಯದ ಸೌಲಭ್ಯಗಳೇ ಇಲ್ಲ.

ಆರು ವರ್ಷಗಳ ಅಂತರದಲ್ಲಿ ನಡೆಸಿರುವ ಮೂರನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ(ಎನ್‌ಎಫ್‌ಹೆಚ್‌ಎಸ್-3) ಎರಡನೇ ಸರ್ವೆಗೆ ಹೋಲಿಸಿದಾಗ, ಕಂಡು ಬರುವ ಸಂಗತಿಗಳು ಆತಂಕಕಾರಿ. 6ರಿಂದ 35 ತಿಂಗಳ ಮಕ್ಕಳಲ್ಲಿ ರಕ್ತಹೀನತೆಯಿಂದ ನರಳುತ್ತಿರುವವರ ಪ್ರಮಾಣ 74.2ಶೇ.ದಿಂದ 79.2 ಶೇ.ಕ್ಕೆ ಏರಿದೆ. 15ರಿಂದ 49ವರ್ಷ ವಯಸ್ಸಿನ ವಿವಾಹಿತ ಮಹಿಳೆಯರಲ್ಲಿ ಈ ಪ್ರಮಾಣ 51.8ಶೇ.ದಿಂದ 56.2ಶೇ.ಕ್ಕೆ ಏರಿದೆ. ಇದೇ ವಯೋಗುಂಪಿನಲ್ಲಿ ಗರ್ಭಿಣಿಯರಲ್ಲಿ ರಕ್ತಹೀನತೆಯ ಪ್ರಮಾಣ 49.7 ಶೇ. ದಿಂದ 57.9ಶೇ. ಕ್ಕೇರಿದೆ.

ಈ ಮೂರನೇ ರಾಷ್ಟ್ರೀಯ ಸರ್ವೆಯ ಪ್ರಕಾರ ಮೂರು ವರ್ಷಕ್ಕಿಂತ ಕೆಳಗಿನ ಮಕ್ಕಳಲ್ಲಿ 38.4 ಶೇ. ಮಕ್ಕಳ ಬೆಳವಣಿಗೆ ಕುಂಠಿತವಾಗಿದೆ. ಅಂದರೆ ವಯಸ್ಸಿಗೆ ತಕ್ಕ ಎತ್ತರವನ್ನು ಅವರು ಹೊಂದಿಲ್ಲ, 46 ಶೇ. ಮಕ್ಕಳ ತೂಕ ಇರಬೇಕಾದುದಕ್ಕಿಂತ ಕಡಿಮೆಯಿದೆ, ಅಂದರೆ ಅವರ ವಯಸ್ಸಿಗೆ ಇರಬೇಕಾದುದಕ್ಕಿಂತ ತೆಳ್ಳಗಿದ್ದಾರೆ. ಇವರಲ್ಲಿ 79.2 ಶೇ. ಮಕ್ಕಳು ರಕ್ತಹೀನತೆಯಿಂದ ನರಳುತ್ತಿದ್ದಾರೆ. ಇದೀಗ ನಮ್ಮ ತಾಯಂದಿರ, ಮಕ್ಕಳ ಸ್ಥಿತಿ-ಗತಿ.

ನಮ್ಮ ಮಕ್ಕಳ ಆರೋಗ್ಯ ನಮ್ಮ ಕುಟುಂಬಗಳ ಜೀವನಾಧಾರ ಸ್ಥಾನಮಾನಗಳನ್ನು ಅವಲಂಬಿಸಿದೆ ಎಂಬುದನ್ನು ಈ ಎಲ್ಲ ವರದಿಗಳು ದೃಢಪಡಿಸುತ್ತಿವೆ. ಉನ್ನತ ಬೆಳವಣಿಗೆಯ ದಿಕ್ಕಿನಲ್ಲಿದ್ದೇವೆ ಎಂಬ ಆಡಂಬರದ ಮಾತುಗಳೇನೇ ಇದ್ದರೂ, ನಿರುದ್ಯೋಗ ದರ 2007ರಲ್ಲಿ 2.8ಶೇ. ಇದ್ದದ್ದು, 2009-10ರಲ್ಲಿ 9.4 ಶೇ. ಕ್ಕೆ ಏರಿತು ಎಂದು ರಾಷ್ಟ್ರೀಯ ಮಾದರಿ ಸರ್ವೆ ಸಂಘಟನೆ(ಎನ್‌ಎಸ್‌ಎಸ್‌ಒ) ಲೆಕ್ಕ ಹಾಕಿದೆ. ಉದ್ಯೋಗ ಮಾಡುವವರಲ್ಲಿ ಕೂಡ 16 ಶೇ. ಮಂದಿಗೆ ಮಾತ್ರ ನಿಯಮಿತ ವೇತನ ಇದೆ. 43 ಶೇ. ಮಂದಿ 'ಸ್ವ-ಉದ್ಯೋಗಿಗಳು' ಎಂಬ ವಿಧದ ಅಡಿಯಲ್ಲಿ ಬರುತ್ತಾರೆ ಮತ್ತು 39ಶೇ. ಕ್ಯಾಶುವಲ್ ಕಾರ್ಮಿಕರು.

ಐಸಿಡಿಎಸ್ ಸಾರ್ವತ್ರೀಕರಣ ಏಕಿಲ್ಲ?

ಈ 'ಹಂಗಾಮ' ವರದಿಯಲ್ಲಿ ತೂಕ ಕಡಿಮೆಯಿರುವ ಮಕ್ಕಳ ಪ್ರಮಾಣ 2004ರಿಂದ 2011ರ ನಡುವೆ 53 ಶೇ.ದಿಂದ 42 ಶೇ.ಕ್ಕೆ ಇಳಿದಿದೆ ಎಂಬ ಪ್ರಸ್ತಾವ ಇದೆ. ಇದೊಂದು ಬಹಳ ವಿವಾದಾಸ್ಪದ ಹೇಳಿಕೆ. ಆದರೆ ಪ್ರಧಾನ ಮಂತ್ರಿಗಳು ಅದಕ್ಕೇ ಅತುಕೊಂಡು "ಕಳೆದ ಏಳು ವರ್ಷಗಳಲ್ಲಿ ಅಪೌಷ್ಟಿಕತೆಯಲ್ಲಿ 20ಶೇ.

ಪುಟ 12 ಕ್ಕೆ



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ 20 ನೇ ಕರ್ನಾಟಕ ರಾಜ್ಯ ಸಮ್ಮೇಳನವು ಇದೇ ಜನವರಿ 08 ರಿಂದ 11, 2012ರವರೆಗೆ ನಾಲ್ಕು ದಿನಗಳ ಕಾಲ ಚಿಕ್ಕ ಬಳ್ಳಾಪುರದ ಕಾಂ. ಜ್ಯೋತಿ ಬಸು ನಗರದಲ್ಲಿ ಕಾಂ.ಜಿ.ವಿ. ಅಶ್ವತ್ಥ ನಾರಾಯಣ ರೆಡ್ಡಿ ವೇದಿಕೆಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಜನವರಿ 8 ರಂದು ನಡೆದ ಬೃಹತ್ ರ್ಯಾಲಿ ಹಾಗೂ ಮೂರು ದಿನಗಳ ಸಮ್ಮೇಳನದ ವಿವಿಧ ಕಲಾಪಗಳು ವಿವರಗಳು ಇಲ್ಲಿವೆ. ನಿಮಗಾಗಿ. .



ಹೊಳೆಯುವ ಭಾರತ - ನರಳುವ ಭಾರತ

'ಎರಡು ಭಾರತಗಳ ಅಂತರ ತೊಲಗಿಸಬೇಕು'

ಬೃಹತ್ ರ್ಯಾಲಿಯಲ್ಲಿ ಯೆಚೂರಿ









ಚಿಕ್ಕಬಳ್ಳಾಪುರದ ಎಪಿಎಂಸಿ ಮೈದಾನದಲ್ಲಿ ನೆರೆದ ಸಾವಿರ ಸಾವಿರ ಜನರಲ್ಲಿ ಅದಮ್ಯ ಉತ್ಸಾಹ. ಕೈಯಲ್ಲಿ ಕೆಂಪು ಬಾವುಟ. ರೈತರು, ಕೂಲಿಕಾರರು, ಮಹಿಳೆಯರು, ಪುರುಷರು, ಮಕ್ಕಳು, ಮುದುಕರು,'ಎಲ್ಲಾ ವಿಭಾಗದ ಜನ ನುಗ್ಗುತಾ, ಮುನ್ನುಗ್ಗುತ್ತಾ ಬಂದರು. ರಸ್ತೆಯ ತುಂಬ ಹರಿದರು. ಘೋಷಣೆಗಳು ಮೊಳಗಿದವು. ಸಿಪಿಐ(ಎಂ) ಜಿಂದಾಬಾದ್, ಬಿಜೆಪಿ ಸರ್ಕಾರದ ಭ್ರಷ್ಟತೆಗೆ ದಿಕ್ಕಾರ, ಜಾಗತಿಕರಣ ನೀತಿಗೆ ಧಿಕ್ಕಾರ, ಸಾಮ್ರಾಜ್ಯ ಶಾಹಿಗೆ ಧಿಕ್ಕಾರ......... ಜನ ಹರಿದು ಬಂದಿದ್ದು ಜೂನಿಯರ್ ಕಾಲೇಜ್ ಮೈದಾನಕ್ಕೆ, ಅಲ್ಲಿ ಬಹಿರಂಗ ಸಭೆ ಮುಖ್ಯ ಭಾಷಣಕಾರರು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ, ಕೆ. ವರದರಾಜನ್. ಅಧ್ಯಕ್ಷತೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ರವರದ್ದು. ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳು ಹಾಗೂ ರಾಜ್ಯ ಸಮಿತಿ ಸದಸ್ಯೆ ಎಸ್. ವರಲಕ್ಷ್ಮಿಯವರು.

1894ರ ಬ್ರಿಟೀಷ್ ಕಾಲದ ಭೂಸ್ವಾಧೀನ ಕಾನೂನಿಗೆ ತಿದ್ದುಪಡಿ ತರುವುದಾಗಿ ಯುಪಿಎ ಸರ್ಕಾರ ಹೇಳುತ್ತಾ ರೈತ ವಿರೋಧಿ ಭೂಸ್ವಾಧೀನ ಶಾಸನಕ್ಕೆ ಮುಂದಾಗಿದೆ. ಇದರ ಬದಲು ರೈತ ಪರ ಭೂಸ್ವಾಧೀನ ಶಾಸನವನ್ನು ರೂಪಿಸಬೇಕು ಎಂದು ಸೀತಾರಾಂ ಯೆಚೂರಿ ಆಗ್ರಹಿಸಿದರು.

ಚಿಕ್ಕಬಳ್ಳಾಪುರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ 20ನೇ ರಾಜ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ 20 ಸಾವಿರಕ್ಕೂ ಹೆಚ್ಚು ಭಾಗವಹಿಸಿದ್ದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮಾರುಕಟ್ಟೆ ಬೆಲೆಗಿಂತ ಹೆಚ್ಚು ಹಣವನ್ನು ಪರಿಹಾರವಾಗಿ ನೀಡುವುದು. ಕುಟುಂಬಕ್ಕೆ ಉದ್ಯೋಗ ನೀಡುವುದು ಮತ್ತು ಮುಂದಿನ 20 ವರ್ಷಗಳವರೆಗೆ ಭೂಮಿಯ ಬೆಲೆಯಲ್ಲಾಗುವ ಹೆಚ್ಚಳದಿಂದ ಉಂಟಾಗುವ ಲಾಭಾಂಶದಲ್ಲಿ ಪಾಲು ನೀಡುವ ಅಂಶಗಳನ್ನು ಒಳಗೊಂಡಂತೆ ಸಮಗ್ರವಾದ ರೈತಪರ ಭೂಸ್ವಾಧೀನ ಮತ್ತು ಪುನರ್ವಸತಿ ಶಾಸನಕ್ಕೆ ಸಿಪಿಐ(ಎಂ) ಒತ್ತಾಯಿಸುತ್ತಿದೆ. ಇದಕ್ಕಾಗಿ ಜನಾಂದೋಲನ ನಡೆಸುತ್ತಿದೆ. ಎಂದು ತಿಳಿಸಿದರು. ಮುಂದುವರೆದು ಯುಪಿಎ-2

ಪುಟ 13ಕ್ಕೆ


ಬೀದಿಯಲ್ಲಿ ಗಲ್ಲಿಯಲ್ಲಿ ಎಲ್ಲೆಲ್ಲೂ ಜನ ಜನಾ...........

ಜನಶಕ್ತಿ
ಕನ್ನಡ ವಾರಪತ್ರಿಕೆ

ಜನಾಂದೋಲನದ ವಿಸ್ತರಣೆ : ಪಕ್ಷದ ಶಕ್ತಿ ಹೆಚ್ಚಿಸುವ ತುಡಿತದ ಅಭಿವ್ಯಕ್ತಿ ಈ ಸಮ್ಮೇಳನ


ಧ್ವಜಾರೋಹಣ. ಕಾಂ.ಕೆ.ಆರ್.ಶ್ರೀಯಾನ್‌ರವರಿಂದ

ವರದಿ: ವಾಸುದೇವ ಉಚ್ಚಿಲ

ಧ್ವಜಾರೋಹಣ :

ಜನವರಿ 9 ರಂದು ಚಿಕ್ಕಬಳ್ಳಾಪುರ ಕಾ.ಜ್ಯೋತಿಬಸು ನಗರದಲ್ಲಿ ಸಿಪಿಎಂ ಪಕ್ಷದ ಕರ್ನಾಟಕ ರಾಜ್ಯ ಸಮ್ಮೇಳನವು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಪಕ್ಷದ ಹಿರಿಯ ನಾಯಕರಲ್ಲೊಬ್ಬರಾದ ಕಾ.ಕೆ.ಆರ್.ಶ್ರೀಯಾನ್ ಅವರು ಪಕ್ಷದ ಧ್ವಜಾರೋಹಣ ಗೈಯುವುದರ ಮೂಲಕ ಆರಂಭವಾಯಿತು. ಹುತಾತ್ಮ ಸ್ಮಾರಕಕ್ಕೆ ಪುಷ್ಪದಳಗಳ ಗೌರವ ಸಲ್ಲಿಸಿ ಪ್ರತಿನಿಧಿ ಸಂಗಾತಿಗಳು ಹಾಗೂ ಅತಿಥಿಗಳು ಸಮ್ಮೇಳನ ಸಭಾಂಗಣ ಪ್ರವೇಶಿಸಿದರು.

ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸಮಿತಿಯ ವೀಕ್ಷಕರಾಗಿದ್ದ ಪಾಲಿಟ್‌ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರನ್ ಪಿಳ್ಳೆ, ಕೆ.ವರದರಾಜನ್ ವೇದಿಕೆಯಲ್ಲಿ ಅತಿಥಿಗಳಾಗಿ ಉಪಸ್ಥಿತರಿದ್ದರು. ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರೆಲ್ಲರೂ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಹುತಾತ್ಮರಿಗೆ ಶ್ರದ್ಧಾಂಜಲಿ.

ರಾಜ್ಯ ಸಮ್ಮೇಳನದ ರಾಜ್ಯ ಸಮಿತಿ ಸದಸ್ಯರೂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಜಿ.ವಿ.ಶ್ರೀರಾಮರೆಡ್ಡಿ ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ಬಂದ ಪ್ರತಿನಿಧಿಗಳನ್ನೂ ಅತಿಥಿಗಳನ್ನೂ ಸ್ವಾಗತಿಸಿದರು. ತಮ್ಮ ಸ್ವಾಗತ ಭಾಷಣದಲ್ಲಿ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ತಾಲೂಕುಗಳು ಹಿಂದೆ ಕೋಲಾರ ಜಿಲ್ಲೆಯ ಭಾಗವಾಗಿದ್ದು, ಕೋಲಾರ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಕ್ಷ ದೊಡ್ಡ ಶಕ್ತಿಯಾಗಿ ಬೆಳೆದು ಬಂದ ಹಿನ್ನೆಲೆಯಲ್ಲಿ ಪ್ರೇರಣೆ ಮಾರ್ಗದರ್ಶನ ಪಡೆದು ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ (ಹಳೆಯ ಕೋಲಾರ ಜಿಲ್ಲೆಯ) ತಾಲೂಕುಗಳಲ್ಲಿ ಪಕ್ಷ ಬೆಳೆದು ಬಂದ ಬಗೆಯನ್ನು ತಿಳಿಸಿದರು. ಕೋಲಾರ ಜಿಲ್ಲೆಯ ಗಣಿ ಕೆ.ಜಿ.ಎಫ್ ಕೋಲಾರಗಳಲ್ಲಿ ವಿವಿಧ ಕೈಗಾರಿಕೆ ಬೆಳೆದು ಬಂದು ಕಾರ್ಮಿಕ ವರ್ಗ ಒಂದು ಶಕ್ತಿಯಾಗಿ ಬೆಳೆದು ಆ ಭಾಗದ ಬೆಳವಣಿಗೆಗೆ ಕಾರಣವಾಯಿತು. ಕಮ್ಯೂನಿಸ್ಟ್ ಪಕ್ಷದ ಮಾರ್ಗದರ್ಶನದಲ್ಲಿ ಕೋಲಾರದ ರೈತರು ಭೂಸುಧಾರಣೆಗಾಗಿ ಹೋರಾಟ ನಡೆಸಿದಾಗ ಹಿರಿಯ ಕಮ್ಯೂನಿಸ್ಟ್ ನೇತಾರರಾಗಿದ್ದ ಎ.ಕೆ.ಗೋಪಾಲನ್‌ರವರು ತಿಂಗಳುಗಟ್ಟಲೆ ಕೋಲಾರದಲ್ಲಿ ವಾಸವಾಗಿದ್ದು ಊರೂರು ಸುತ್ತಾಡಿ ರೈತ ಹೋರಾಟಕ್ಕೆ ಮಾರ್ಗದರ್ಶನ ನೀಡಿದರು. ಈ ಹೋರಾಟದ ಫಲವಾಗಿ ಮೂಡಿಬಂದ ಭೂಸುಧಾರಣಾ ಕಾನೂನುಗಳ ಅತೀ ಹೆಚ್ಚು ಫಲಾನುಭವಿಗಳು ಕೋಲಾರ ಜಿಲ್ಲೆಯಲ್ಲಿದ್ದಾರೆ. ಅಷ್ಟು ಮಾತ್ರವಲ್ಲ ರಾಜ್ಯದ ವಿಧಾನಸಭೆಗೆ ಮೊತ್ತ ಮೊದಲ ಕಮ್ಯೂನಿಸ್ಟ್ ಶಾಸಕರನ್ನು ಚುನಾಯಿಸಿ ಕಳುಹಿಸಿದ ಕೀರ್ತಿಯೂ ಕೋಲಾರ ಜಿಲ್ಲೆಗಿದೆ. ರಾಜ್ಯ ವಿಧಾನಸಭೆಗೆ ಹಲವರು ಕಮ್ಯೂನಿಸ್ಟರನ್ನು ಶಾಸಕರಾಗಿ ಈ ಜಿಲ್ಲೆ ಆಯ್ಕೆ ಮಾಡಿದೆ. ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಗೆ ಒಳಪಟ್ಟ ಬಾಗೇಪಲ್ಲಿಯಿಂದ ತನ್ನನ್ನು ಎರಡು ಬಾರಿ ಶಾಸಕನಾಗಿ ಕಳುಹಿಸಿದ ವಿಶ್ವಾಸವೂ ಈ ಜಿಲ್ಲೆಯದ್ದಾಗಿದೆ ಎಂದು ವಿವರಿಸಿ ಜಿ.ವಿ.ಶ್ರೀರಾಮರೆಡ್ಡಿಯವರು ಅತಿಥಿಗಳನ್ನು ಸ್ವಾಗತಿಸಿದರು.


ಕರಡು ವರದಿ ಮಂಡಿಸುತ್ತಿರುವ ಕಾಂ.ವಿ.ಜೆ.ಕೆ.ನಾಯರ್

ಪಾಲಿಟ್ ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರನ್ ಪಿಳ್ಳೆಯವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.


ಪ್ರತಿನಿಧಿ ಅಧಿವೇಶನ ಉದ್ಘಾಟಿಸಿದ ಕಾಂ.ಎಸ್.ರಾಮಚಂದ್ರಪಿಳ್ಳೆ

ಅದಕ್ಕೂ ಮೊದಲು ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಮರಣ ಹೊಂದಿದ ಪಕ್ಷದ ಮುಖಂಡರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಾರ್ಯದರ್ಶಿ ಮಂಡಲಿ ಸದಸ್ಯರಾದ ನಿತ್ಯಾನಂದ ಸ್ವಾಮಿಯವರು ಶ್ರದ್ಧಾಂಜಲಿ ನಿರ್ಣಯಗಳನ್ನು ಮಂಡಿಸಿದರು.

ಸ್ವತಂತ್ರ ಕಾರ್ಯಕ್ರಮಗಳಿಂದ ಪಕ್ಷ ವಿಸ್ತರಿಸಿ– ಎಸ್.ರಾಮಚಂದ್ರನ್ ಪಿಳ್ಳೆ ಕರೆ.

ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಗಳು ಅಧಿಕಾರವನ್ನು ತಮ್ಮ ವಶ ಪಡೆಯುವುದಕ್ಕಾಗಿ ಪ್ರಾದೇಶಿಕ ಪಕ್ಷಗಳನ್ನು ಜೊತೆಗೂಡಿಸಿ ಕೊಂಡು ತಮ್ಮ ತಮ್ಮ ರಂಗಗಳನ್ನು ರಚಿಸಿಕೊಂಡಿವೆ. ಈ ಎರಡೂ ಪಕ್ಷಗಳಲ್ಲಿ ಆರ್ಥಿಕ ನೀತಿಗಳಲ್ಲಿ ವ್ಯತ್ಯಾಸವಿಲ್ಲ. ಇವರ ಜೊತೆಗಾರರಾದ ಪ್ರಾದೇಶಿಕ ಪಕ್ಷಗಳೂ ಅಮೇರಿಕಾ ಸಾಮ್ರಾಜ್ಯಶಾಹಿಯ ವಿರೀಧಿಗಳಲ್ಲ; ನವ ಉದಾರವಾದೀ ಆರ್ಥಿಕ ನೀತಿಗಳಿಗೂ ವಿರೋಧಿಗಳಲ್ಲ; ಬಂಡವಾಳಶಾಹಿ ಹಾಗೂ ಪಾಳೇಗಾರಿ ಶಕ್ತಿಗಳ ಹಿತಸಾಧಕರು ಇವರು; ಕೆಲವೊಮ್ಮೆ ವಿರೋಧ ಪಕ್ಷವಾಗಿ ಇವರು ಕಾರ್ಯನಿರ್ವಹಿಸುತ್ತಾರಾದರೂ, ರಾಜ್ಯಗಳಲ್ಲಿ ಅಧಿಕಾರ ಹಿಡಿಯುವ ಸಮಯ ಸಾಧಕತನದ ನೀತಿ ಇವರದು. ಇವರ ಕೈಹಿಡಿದ ಕಾಂಗ್ರೆಸ್ ಪಕ್ಷವಾಗಲೀ ಬಿಜೆಪಿಯಾಗಲೀ ಒಂದೇ ಬಗೆಯಲ್ಲಿ ಜನವಿರೋಧಿ ಆರ್ಥಿಕ ನೀತಿಯನ್ನು ಅನುಸರಿಸುವಲ್ಲಿ ಸಮಾನರಾಗಿರುವುದು ಮಾತ್ರವಲ್ಲ ಭ್ರಷ್ಟಾಚಾರೀ ಮಾರ್ಗಗಳ ಮೂಲಕ ಕಬಳಿಸುವುದರಲ್ಲಿಯೂ ಸಮಾನರಾಗಿದ್ದಾರೆ. ಅಮೇರಿಕಾ ಸಾಮ್ರಾಜ್ಯಶಾಹಿಗೆ ತೀವ್ರ ವಿರೋಧ ತೋರುವಲ್ಲಿ, ಜನವಿರೋಧಿ ಆರ್ಥಿಕ ನೀತಿಗಳಲ್ಲಿ ವಿರೋಧಿಸುವಲ್ಲಿ, ಭ್ರಷ್ಟಾಚಾರವನ್ನು ತೀವ್ರವಾಗಿ ಎದುರಿಸುವಲ್ಲಿ ಸಿಪಿಎಂ ಮತ್ತು ಎಡಪಕ್ಷಗಳು ಮಾತ್ರ ಸಮಗ್ರ ದೃಢತೆ ಹೊಂದಿದೆ. ಈ ನೀತಿಗಳ ಆಧಾರದಲ್ಲಿ ಸಿಪಿಎಂ

ಪುಟ 10ಕ್ಕೆ......

ಸಮ್ಮೇಳನ ಸಂಭಾಗಣದ ಒಂದು ನೋಟ



ಜನಶಕ್ತಿ
ಕನ್ನಡ ವಾರಪತ್ರಿಕೆ

ಜನಾಂದೋಲನದ ವಿಸ್ತರಣೆ ....



ಸಮ್ಮೇಳನ ನಡೆಸಿಕೊಟ್ಟ ಅಧ್ಯಕ್ಷೀಯ ಮಂಡಳಿ, ಬಲದಿಂದ ಕಾಂ.ಸಿದ್ಧಗಂಗಪ್ಪ, ಕೆ.ಪ್ರಕಾಶ್, ಎಸ್.ವರಲಕ್ಷ್ಮಿ, ಕೆ.ಆರ್.ಶ್ರೀಯಾನ್

ಪುಟ 9 ರಿಂದ..........

ಜನತೆಯನ್ನು ಹೋರಾಟಕ್ಕೆ ಅಣಿಗೊಳಿಸುತ್ತಿದೆ. ಈ ದಾರಿಯಲ್ಲಿ ನಮ್ಮೊಡನೆ ಜತೆಗೂಡಲು ಸಿದ್ಧರಿರುವವರನ್ನು ವಿಚಾರಗಳ ಆಧಾರದಲ್ಲಿ – ಜತೆಗೂಡಿಸಿಕೊಂಡು ಒಂದು ಬಲಶಾಲಿ ಜನತೆಯ ಹೋರಾಟವನ್ನು ಸಿಪಿಎಂ ಕಟ್ಟಿಸುತ್ತಿದೆ ಎಂಬುದಾಗಿ. ಸಿಪಿಎಂ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಎಸ್.ರಾಮಚಂದ್ರನ್ ಪಿಳ್ಳೆ ಹೇಳಿದರು.

ಈ ಸಮ್ಮೇಳನದಲ್ಲಿ ಪ್ರತಿನಿಧಿಗಳು 349, ವೀಕ್ಷಕರು 51 ಹಾಜರಾಗಿದ್ದರು.

ಅವರು ಮಾತನಾಡುತ್ತಾ, ಕಳೆದ ನಾಲ್ಕು ವರ್ಷಗಳ ಜಾಗತಿಕ ವಿದ್ಯಾಮಾನಗಳ ಹಿನ್ನೆಲೆಯಲ್ಲಿ ಚಳುವಳಿ ಕಟ್ಟಬೇಕಾದ ಪರಿಸ್ಥಿತಿಗಳ ವಿಶ್ಲೇಷಣೆ ನಡೆಸಿದರು. ಅವುಗಳಲ್ಲಿ ಮುಖ್ಯವಾದ 4 ವಿದ್ಯಾಮಾನಗಳು ಇವು:

1. ಜಗತ್ತಿನಾದ್ಯಂತ ಮುಂದುವರಿಯುತ್ತಿರುವ ಆರ್ಥಿಕ ಬಿಕ್ಕಟ್ಟು.

2. ಅಮೇರಿಕಾದಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದ್ದರೂ ಅದು ತಾನು ಇತರ ರಾಷ್ಟ್ರಗಳ ಮೇಲಿನ ದಬ್ಬಾಳಿಕೆಯನ್ನು ಮುಂದುವರಿಸಿರುವುದು. 3. ದಬ್ಬಾಳಿಕೆಗಿದಿರಾಗಿ ಜನತೆಯ ಹೋರಾಟಗಳು ಹೆಚ್ಚುತ್ತಿವೆ; ಲ್ಯಾಟಿನ್ ಅಮೇರಿಕಾದ್ದೇ ಆದ ವಿಶೇಷ ಮಾದರಿ ಇಲ್ಲಿ ಕಂಡು ಬರುತ್ತಿದೆ. 4. ಸಮಾಜವಾದಿ ರಾಷ್ಟ್ರಗಳು ಈ ಅವಧಿಯಲ್ಲಿ ಕೆಲವು ಪ್ರಯೋಗಗಳನ್ನು ಕೈಗೊಳ್ಳುತ್ತಿವೆ; ಆ ಮೂಲಕ ಸಮಾಜವಾದವೇ ಬಂಡವಾಳಶಾಹಿಗೆ ಪರ್ಯಾಯ ಎಂಬುದನ್ನು ಸೂಚಿಸುತ್ತಿವೆ. ಜಾಗತಿಕ ಆರ್ಥಿಕ ಬಿಕ್ಕಟ್ಟು ಬಂಡವಾಳಶಾಹಿಯ ದಿವಾಳಿತನವನ್ನು ವಿಷದಪಡಿಸುತ್ತಿದೆ.

ನವ ಉದಾರವಾದಿ ನೀತಿಗಳು ಹಾಗೂ ಪ್ರಸ್ತುತ ಆರ್ಥಿಕ ಬಿಕ್ಕಟ್ಟು ಕೇವಲ ಬಂಡವಾಳ ಶಾಹಿ ರಾಷ್ಟ್ರಗಳ ಆರ್ಥಿಕ ಸಂಸ್ಥೆಗಳನ್ನು ಮಾತ್ರ ದಿವಾಳಿ ಗೊಳಿಸುತ್ತಿಲ್ಲ. ಸರಕಾರಗಳನ್ನೂ ದಿವಾಳಿಗೊಳಿಸುತ್ತಿದೆ. ಇದನ್ನು ಯುವಜನ, ವಿದ್ಯಾರ್ಥಿಗಳು, ಮಹಿಳೆಯರು, ಕಾರ್ಮಿಕರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಗ್ರೀಸ್‌ನಲ್ಲಿ ಇದನ್ನು ನೋಡುತ್ತಿದ್ದೇವೆ. ಅಮೇರಿಕಾದ ವಾಲ್‌ಸ್ಟ್ರೀಟ್‌ನಲ್ಲಿ ನೋಡುತ್ತಿದ್ದೇವೆ.


ಜನತೆಯ ಪ್ರತಿಭಟನೆಗಳು ಒಂದು ರಾಜಕೀಯ ಹೋರಾಟದ ಕಡೆಗೆ ಪರಿವರ್ತಿತವಾಗುವ ಲಕ್ಷಣಗಳು ಕಂಡು ಬರುತ್ತಿದೆ. ಈಗಾಗಲೇ ಬೊಲಿವಿಯಾ, ಉರುಗ್ವೆ, ಬ್ರೆಜಿಲ್‌ಗಳಲ್ಲಿ ಪ್ರಗತಿಪರ ಸರಕಾರಗಳು ಅಸ್ತಿತ್ವಕ್ಕೆ ಬಂದಿವೆ. ಅರಬ್ ರಾಷ್ಟ್ರಗಳಲ್ಲೂ ಅಮೇರಿಕಾದ ಸಾಮ್ರಾಜ್ಯಶಾಹಿಗೆದುರಾಗಿ ಪ್ರತಿಭಟನೆಗಳು ತೀವ್ರವಾಗಿವೆ. ಟ್ಯುನಿಶಿಯಾ ಮತ್ತಿತರ ಕಡೆ ತಮ್ಮದೇ ಸರಕಾರಗಳನ್ನು ಜನತೆ



ನಿರ್ಣಯ ಸಮಿತಿ

ಸ್ಥಾಪಿಸಿದ್ದಾರೆ.ಈಜಿಪ್ಟ್ ಲಿಬಿಯಾದಲ್ಲೂ ಇದೇ ಸರಣಿಯಲ್ಲಿ ಪ್ರತಿಭಟನೆ ಮೂಡಿದ್ದು, ಅರಬ್ ರಾಷ್ಟ್ರಗಳಲ್ಲಿ ಪ್ರಮುಖ ನೈಸರ್ಗಿಕ ಸಂಪನ್ಮೂಲಗಳಾದ ಗ್ಯಾಸ್, ಪೆಟ್ರೋಲಿಯಂಗಳನ್ನು ವಿದೇಶೀ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪದಿಂದ ವಿಮುಕ್ತಿಗೊಳಿಸಿ ತಮ್ಮದೇ ಜನತೆಯ ಪ್ರಭುತ್ವದಲ್ಲಿ ಉಳಿಸಿಕೊಳ್ಳುವ ಆರ್ಥಿಕ ಹೋರಾಟಗಳೂ ಇವಾಗಿವೆ.

ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳು ಜಾಗತಿಕ ಆರ್ಥಿಕ ಸ್ವಾಮ್ಯಕ್ಕಾಗಿ ಎಲ್ಲ ಸ್ವತಂತ್ರ ರಾಷ್ಟ್ರಗಳ ಮೇಲಿನ ಧಾಳಿಯನ್ನು ಮುಂದುವರಿಸಲಿವೆ ಎಂಬುದನ್ನು ಸಿಪಿಐ(ಎಂ)ನ 19ನೇ ಅಧಿವೇಶನದಲ್ಲಿಯೇ ಹೇಳಲಾಗಿತ್ತು. ಪರಿಸರ ಮಾಲಿನ್ಯದ ಕುರಿತಾದ ಜಾಗತಿಕ ಸಂವಾದದಲ್ಲಿ ಮಾಲಿನ್ಯದ ಪಾಲಿನ ತನ್ನ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಅಮೇರಿಕಾ ಸಾಮ್ರಾಜ್ಯಶಾಹಿ ನಿರಾಕರಿಸಿದನ್ನು ದರ್ಬಾನ್ ಸಮಾವೇಶದಲ್ಲಿ ನಾವು ಕಂಡುಕೊಂಡಿದ್ದೇವೆ. ಆದರೂ ಭಾರತ ಸರಕಾರವು ಅಮೇರಿಕಾಕ್ಕೆ ಪೂರಕವಾಗಿ ತನ್ನ ವಾತಾವರಣ ಬದಲಾವಣೆ ನೀತಿಯನ್ನು ಪರಿವರ್ತಿಸಿಕೊಂಡಿದೆ.



ಕಳೆದ 2 ದಶಕಗಳಿಂದ ಭಾರತವೂ ನವ ಉದಾರವಾದಿ ನೀತಿಗಳನ್ನು ಅನುಸರಿಸುತ್ತಿರು ವುದರ ಪರಿಣಾಮವಾಗಿ ಅಸಮಾನ ಬೆಳವಣಿಗೆ, ನಿರುದ್ಯೋಗ, ಬಡತನ, ಹಸಿವು ಮೊದಲಾದ ಸಮಸ್ಯೆಗಳನ್ನು ನಿವಾರಿಸಲು ವಿಫಲವಾಗಿದೆ ಎಂಬುದನ್ನು ನಾವು ಕಾಣುತ್ತಿದ್ದೇವೆ. ಕಲ್ಲಿದ್ದಲು, ಉಕ್ಕು, ಸಿಮೆಂಟು, ಅನಿಲ ಉತ್ಪಾದನೆಯಲ್ಲಿ ನಾವು ಹಿನ್ನಡೆಯನ್ನು ಕಾಣುತ್ತಿದ್ದೇವೆ. ಆಹಾರ ವಸ್ತುಗಳ ಬೆಲೆ ಏರಿಕೆ ತಡೆಯಲಾಗುತ್ತಿಲ್ಲ. ರೈತಾಪಿಗಳ ಕೃಷ್ಯುತ್ಪನ್ನಗಳಿಗೆ ತಕ್ಕುದಾದ ಬೆಲೆ ಸಿಗುತ್ತಿಲ್ಲ; ಭೂಮಿ ಮಾರಾಟ ಮಾಡಿ ಕೃಷಿ ಕೂಲಿಗಾರರಾಗುತ್ತಿದ್ದಾರೆ. ಸಾಲದ ಬಾಧೆ ತಾಳಲಾರದೆ ಪ್ರತಿ ಗಂಟೆಗೆ 2 ಮಂದಿಯಂತೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಾರ್ಮಿಕರ ವೇತನವೂ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಗುತ್ತಿಗೆ ಕಾರ್ಮಿಕತನ ಹೆಚ್ಚಾಗುತ್ತಿದೆ. ಉದ್ಯೋಗ ಸಂಖ್ಯೆ ಕಡಿಮೆಯಾಗುತ್ತಿದೆ. ಕೃಷಿ ಕೂಲಿಕಾರರ ಕಷ್ಟಗಳು ಇನ್ನಷ್ಟು ಹೆಚ್ಚುತ್ತಿವೆ. ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ ಸಿಗುತ್ತಿಲ್ಲ. ಕನಿಷ್ಟ ಕೂಲಿ ಖಾತ್ರಿಗೊಳಿಸಲು ಸರಕಾರ ನಿರಾಕರಿಸುತ್ತಿದೆ. ರಾಜ್ಯ ಸರಕಾರಗಳು ಕೂಡಾ ಕನಿಷ್ಟ ಕೂಲಿ ಕಾನೂನುಗಳನ್ನು ನಿರ್ಜೀವವಾಗಿಟ್ಟಿವೆ. ಎಡಪಕ್ಷಗಳ ಸರ್ಕಾರಗಳು ಇದ್ದಾಗ ಮಾತ್ರ ಕನಿಷ್ಟ ಕೂಲಿ ಮತ್ತು ಸಾಮಾಜಿಕ ಭದ್ರತೆ ಇತ್ತು.

ದೇಶದಲ್ಲಿ ರೈತರ, ಕಾರ್ಮಿಕರ, ಕೃಷಿಕೂಲಿಕಾರರ ಹಾಗೂ ಸಾಮಾನ್ಯ ಜನತೆಯ ಪರಿಸ್ಥಿತಿ ಹೀಗಿದ್ದರೆ, ಅದಕ್ಕೆ ವಿರುದ್ಧವಾಗಿ ಶ್ರೀಮಂತರ ಸಂಖ್ಯಾ ಪ್ರಮಾಣ ಮತ್ತು ಅವರ ಸಂಪತ್ತು ತುಂಬಾ ಹೆಚ್ಚಳ ಆಗಿದೆ. ಕೇವಲ 9 ಶ್ರೀಮಂತ ಕುಟುಂಬಗಳು ಇದ್ದ ಸ್ಥಾನದಲ್ಲಿ ಇವತ್ತು 50 ಮೀರಿದ ಕುಟುಂಬಗಳು ಸೇರ್ಪಡೆಯಾಗಿವೆ. ಹೊಸ ಆರ್ಥಿಕ ನೀತಿಗಳೇ ಈ ತಾರತಮ್ಯಕ್ಕೆ ಕಾರಣವಾಗಿವೆ.

ಹೆಚ್ಚುತ್ತಿರುವ ಭ್ರಷ್ಟಾಚಾರ ಇನ್ನೊಂದು ಬೆಳವಣಿಗೆ. 1,76,000 ಕೋಟಿ ರೂಪಾಯಿಗಳ 2ಜಿ ಹಗರಣ, ಇನ್ನಷ್ಟು ಲಕ್ಷ ಕೋಟಿಗಳ ಕೃಷ್ಣ ಗೋದಾವರಿ ತೈಲ ಹಗರಣ ಕೇಂದ್ರ ಮಟ್ಟದಲ್ಲಿದ್ದರೆ, ಅವಕ್ಕೆ ಸಮಸ್ಪರ್ಧಿಯಾಗಿ ಗಣಿ ಲೂಟಿ ಹಗರಣಗಳೂ ಇವೆ. ಖಾಸಗೀಕರಣವೇ ಇವಕ್ಕೆಲ್ಲ ಮೂಲ. ಭ್ರಷ್ಟ ಕಾರ್ಪರೇಟರ್‌ಗಳು, ಭ್ರಷ್ಟ ರಾಜಕರಣಿಗಳು, ಭ್ರಷ್ಟ ಬ್ಯೂರೋಕ್ರಾಟುಗಳು ಇವುಗಳಲ್ಲಿ ಪಾಲುದಾರರು. ಕೇವಲ ಲೋಕಪಾಲ ಕಾಯ್ದೆಯೊಂದೇ ಭ್ರಷ್ಟಾಚಾರವನ್ನು ಮಟ್ಟಹಾಕಲಾರದು. ಚುನಾವಣೆಗಳಲ್ಲಿ ಹಣದ ಪಾತ್ರ ಇಲ್ಲವಾಗುವಂಥ ಚುನಾವಣಾ ಸುಧಾರಣೆ ಬೇಕು. ಸ್ವತಂತ್ರ ತನಿಖಾ ವ್ಯವಸ್ಥೆ ಹೊಂದಿದ ಲೋಕಪಾಲ ಬೇಕು. ಭ್ರಷ್ಟಾಚಾರದ ಹಣ ಮುಟ್ಟುಗೋಲು ಹಾಕಿ ಜನತೆಯ ಉಪಯೋಗಕ್ಕೆ ಬಳಕೆಯಾಗಬೇಕು.


ಕಳೆದ 4 ವರ್ಷಗಳಲ್ಲಿ ದೊಡ್ಡ ರಾಜಕೀಯ ಬೆಳವಣಿಗೆಗಳಾಗಿವೆ. ಯುಪಿಎ 1ನೇ ಸರ್ಕಾರಕ್ಕೆ ನಾವು ಬೆಂಬಲ ಹಿಂತೆಗೆದೆವು. ಲೋಕಸಭಾ ಹಾಗೂ ರಾಜ್ಯದ ವಿಧಾನಸಭಾ ಚುನಾವಣೆಗಳಲ್ಲಿ ನಮಗೆ ಹಿನ್ನಡೆಯುಂಟಾಯಿತು. ಎಡಪಕ್ಷಗಳು ಪಶ್ಚಿಮ ಬಂಗಾಳದಲ್ಲಿ 34 ವರ್ಷಗಳ ಬಳಿಕ ಅಧಿಕಾರ ಕಳೆದು ಕೊಂಡಿತು. ಕೇರಳದಲ್ಲೂ ಈಗ ಅಧಿಕಾರ ಕಳೆದು ಹೋಗಿದೆ. ಕೆಲವು ರಾಜ್ಯಗಳಲ್ಲಿ ಬಿಜೆಪಿ ಆಡಳಿತ ನಡೆಸುತ್ತಿದೆ. ಅಲ್ಲೆಲ್ಲಾ ಭ್ರಷ್ಟಾಚಾರ ಮಿತಿಮೀರಿ ಹೋಗಿವೆ. ಭ್ರಷ್ಟಾಚಾರದ ಮಟ್ಟಿಗೆ ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿ ಇಲ್ಲ ಎಂಬುದೇ ವ್ಯತ್ಯಾಸ.

ಈ ಹಿನ್ನೆಲೆಯಲ್ಲಿ ಸಿಪಿಎಂ ಪಕ್ಷವನ್ನು ತೀವ್ರ ರೀತಿಯಲ್ಲಿ ವಿಸ್ತಾರಗೊಳಿಸಬೇಕಾಗಿದೆ. ಹೊಸ ಹೊಸ ಜನ ವಿಭಾಗಗಳು ಪಕ್ಷದೊಂದಿಗೆ ಸಂಪರ್ಕ ಹೊಂದುತ್ತಿರುವುದು ಹಲವು ರಾಜ್ಯಗಳಲ್ಲಿ ನಡೆದ ಸಿಪಿಎಂ ಪಕ್ಷದ ಸಮ್ಮೇಳನಗಳಿಂದ ಸ್ಪಷ್ಟವಾಗುತ್ತಿದೆ. ಸ್ವತಂತ್ರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು

ಕರ್ನಾಟಕ ರಾಜ್ಯದಲ್ಲಿಯೂ ಪಕ್ಷಕ್ಕೆ ತೀವ್ರಗತಿಯ ವಿಸ್ತರಣೆ ನೀಡಲು ಕೆ.ವರದರಾಜನ್ ಕರೆ ನೀಡಿದರು.

ಜನಪರ ಪರ್ಯಾಯಕ್ಕಾಗಿ ಸಂಘರ್ಷಾತ್ಮಕ ಆಂದೋಲನದತ್ತ ಮುನ್ನಡೆಯಿರಿ

ಸಮಾರೋಪ ಸಮಾರಂಭದಲ್ಲಿ ಕೆ. ವರದರಾಜನ್



ಜನವರಿ 11, 2012ರಂದು ನೂತನ ರಾಜ್ಯ ಸಮಿತಿಯ ಆಯ್ಕೆಯ ನಂತರ ಯಶಸ್ವಿ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಿತು. ನಾಲ್ಕು ದಿನಗಳ ಕಾಲ ಸಮ್ಮೇಳನದಲ್ಲಿ ಹಾಜರಿದ್ದು, ಎಲ್ಲಾ ಕಲಾಪಗಳನ್ನು ತನ್ಮಯತೆಯಿಂದ ವೀಕ್ಷಿಸಿದ ಪೊಲಿಟ್‌ಬ್ಯೂರೋ ಸದಸ್ಯರಾದ ಕಾ॥.ಕೆ.ವರದರಾಜನ್ ಸಮ್ಮೇಳನದ ಚರ್ಚೆಯನ್ನು ಕ್ರೋಢಿಕರಿಸಿ ಸಮಾರೋಪದ ಮಾತುಗಳನ್ನು ಆಡಿದರು.

ಶಾಖೆಗಳ ಹಂತದಿಂದ ಕ್ರಮವಾಗಿ ಮೇಲಿನ ಸಮ್ಮೇಳನಗಳಿಗೆ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿ ಬರುವಂತೆ ಈ ರಾಜ್ಯ ಸಮ್ಮೇಳನಕ್ಕೆ ಕೆಳ ಹಂತದಿಂದ ಚುನಾಯಿತರಾಗಿ ಬಂದ ಪ್ರತಿನಿಧಿಗಳಾದ ನೀವು ಪ್ರಜಾಸತ್ತಾತ್ಮಕ ವಿಧಾನದಲ್ಲಿ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿದ್ದೀರಿ. ಬೂರ್ಜ್ವಾ ರಾಜಕೀಯ ಪಕ್ಷಗಳಲ್ಲಿ ಸಮಿತಿ ಸದಸ್ಯರನ್ನು ಮುಖಂಡರು ನೇಮಿಸುತ್ತಾರೆ. ಆದರೆ ಅವರೇ ಕಮ್ಯುನಿಸ್ಟ್ ಪಕ್ಷದಲ್ಲಿ ಪ್ರಜಾಪ್ರಭುತ್ವ ಇಲ್ಲ ಎಂದು ಆರೋಪಿಸುತ್ತಾರೆ. ನಿಜವಾದ ಪ್ರಜಾಪ್ರಭುತ್ವ ಇರುವುದು ಕಮ್ಯುನಿಸ್ಟ್ ಪಕ್ಷದಲ್ಲಿ, ಸಿಪಿಐ(ಎಂ) ಪಕ್ಷದಲ್ಲಿ ಮಾತ್ರ. ನಾವು ನಮ್ಮ ಪಕ್ಷವನ್ನು ಕ್ರಾಂತಿಕಾರಿ ಪಕ್ಷ ಎಂದು ಕರೆದುಕೊಳ್ಳುವುದರಿಂದ ಈ ಪಕ್ಷದಲ್ಲಿ ಪ್ರಜಾಪ್ರಭುತ್ವ ಇಲ್ಲ ಎಂದು ಅವರು ಹೇಳುತ್ತಾರೆ. ನಮ್ಮದು ಕ್ರಾಂತಿಕಾರಿ ಪಕ್ಷ ಎಂಬುದು ಸರಿ. ಕೆಲವರು ನಮ್ಮದು ಚುನಾವಣಾ ಪಕ್ಷವಲ್ಲ ಎನ್ನುತ್ತಾರೆ. ಅದು ಅಷ್ಟು ಸರಿಯಾದದ್ದಲ್ಲ. ಬರೀ ಚುನಾವಣಾ ಪಕ್ಷವಲ್ಲ ಎಂದು ಹೇಳಬೇಕು. ನಾವು ಪ್ರಸ್ತುತ ಚುನಾವಣೆಗಳನ್ನು ಜನ ಚಳುವಳಿಗಳ ಮುನ್ನಡೆಗೆ ಬಳಸುತ್ತೇವೆ.

ಇತ್ತೀಚಿನ ವರ್ಷಗಳಲ್ಲಿ ಚುನಾವಣೆಗಳಲ್ಲಿ ಹಣ ಮತ್ತು ಜಾತಿಯ ಪಾತ್ರ ಹೆಚ್ಚುತ್ತಿದೆ. ತಮಿಳುನಾಡಿನಲ್ಲಿ ಒಂದು ಓಟಿಗೆ ಮೂರು ಸಾವಿರ ರೂಪಾಯಿಗಳವರೆಗೆ ಇದೆ. ಜನರಿಂದ ಹಣ ಸಂಗ್ರಹ ಮಾಡಿ ರಾಜಕೀಯ ಮಾಡುವ ಪಕ್ಷಕ್ಕೆ ಕಷ್ಟದ ಪರಿಸ್ಥಿತಿ ಎದುರಾಗುತ್ತಿದೆ.

ಪ್ರಜಾಪ್ರಭುತ್ವ ಅಪಾಯದಲ್ಲಿದೆ. ದೇಶದ ಸಾರ್ವಭೌಮತೆ ಗಂಡಾಂತರಕ್ಕೆ ಸಿಕ್ಕಿದೆ. ಭಾರತ ಸರ್ಕಾರ ಅಮೆರಿಕದೊಡನೆ ಹಲವಾರು ಅಂತರರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ. ಆದರೆ ಆ ಬಗ್ಗೆ ಎಷ್ಟೋ ಸಚಿವರುಗಳಿಗೂ ಏನೂ ಗೊತ್ತಿಲ್ಲ. ಸಂಸದರಿಗೂ ಏನೂ ಗೊತ್ತಿಲ್ಲ. ದುರದೃಷ್ಟವಶಾತ್ ಕಾಂಗ್ರೆಸ್ ಬಿಜೆಪಿ ಪಕ್ಷಗಳೆರಡೂ ಇಂತಹ ದೇಶ ವಿರೋಧಿ, ಜನವಿರೋಧಿ ನೀತಿಗಳಲ್ಲಿ ಪೈಪೋಟಿ ನಡೆಸುತ್ತಿವೆ. ಪ್ರಾದೇಶಿಕ ಪಕ್ಷಗಳನ್ನು ತಮ್ಮ ಕಡೆಗೆಳೆದುಕೊಳ್ಳಲು ಅವು ಪ್ರಯತ್ನಿಸುತ್ತಿವೆ. ಈ ನೀತಿಗಳಿಗೆ ಏನಾದರೂ ಪರ್ಯಾಯ ಮೂಡಿಬರಬೇಕಾದರೆ ಅದು ಸಿಪಿಐ(ಎಂ) ಮತ್ತು ಎಡಪಕ್ಷಗಳ ನೇತೃತ್ವದಲ್ಲಿ ಮಾತ್ರವೇ ಸಾಧ್ಯ. ಇದಕ್ಕಾಗಿ ಪ್ರಾದೇಶಿಕ ಪಕ್ಷಗಳ ಜೊತೆ ಹೋರಾಟಗಳನ್ನು ಕಟ್ಟಬೇಕಾಗುತ್ತದೆ. ಪ್ರಾದೇಶಿಕ ಪಕ್ಷಗಳಲ್ಲಿ ಹಲವು ಸಮಸ್ಯೆಗಳಿರಬಹುದು. ಆದರೂ ಅದು ಅಗತ್ಯವಾಗಿದೆ.

ಜೊತೆಗೆ ಜನರ ಬದುಕಿನ ಪ್ರಶ್ನೆಗಳಲ್ಲಿ, ಸಮಸ್ಯೆಗಳ ವಿಷಯದಲ್ಲಿ ನಾವು ಮಧ್ಯ ಪ್ರವೇಶ ಮಾಡಿದರೆ ಜನತೆ ಪಕ್ಷ ಬೇಧ ಮರೆತು ನಮ್ಮೊಂದಿಗೆ ಬರಲಿದ್ದಾರೆ.


ಇತ್ತೀಚೆಗೆ ತಮಿಳು ನಾಡಿನ ವಿಳುಪುರಂನಲ್ಲಿ ನಡೆದ ಗುಡಿಸಲು ನಿವಾಸಿಗಳ ಹೋರಾಟ, ರಾಜಾಸ್ತಾನದ ರೈತ ಹೋರಾಟದ ಅನುಭವಗಳು ಇದನ್ನೇ ಹೇಳುತ್ತಿವೆ. ನಾವು ಜನರ ಸಮಸ್ಯೆಗಳ ವಿಷಯದಲ್ಲಿ ತತ್‌ಕ್ಷಣ ಮಧ್ಯಪ್ರವೇಶ ಮಾಡಬೇಕು. ತೀವ್ರವಾದ ಸಂಘರ್ಷಾತ್ಮಕವಾದ ಹೋರಾಟಗಳನ್ನು ನಡೆಸಬೇಕು. ಕರ್ನಾಟಕ ರಾಜ್ಯದಲ್ಲಿ ಜನ ಚಳುವಳಿ ಮತ್ತು ಪಕ್ಷದ ಸಂಘಟನೆಯನ್ನು ಬಲಪಡಿಸುವ ಕೆಲಸಕ್ಕೆ ಸಿಪಿಐ(ಎಂ)ಪಕ್ಷದ ಪೊಲಿಟ್ ಬ್ಯೂರೋ ಮತ್ತು ಕೇಂದ್ರ ಸಮಿತಿಗಳು ಸಂಪೂರ್ಣ ಸಹಕಾರ ಮತ್ತು ಬೆಂಬಲ ನೀಡುತ್ತವೆ. ನೀಡುತ್ತವೆ.

ಜನ ಇವರು ನಮ್ಮವರು ಎನ್ನುವಂತೆ ಕೆಲಸ ಮಾಡಬೇಕು –ಜಿ.ವಿ.ಶ್ರೀರಾಮರೆಡ್ಡಿ :

ಕರ್ನಾಟಕ ರಾಜ್ಯದಲ್ಲಿ ಪಕ್ಷವನ್ನು ಸಂಘಟಿಸಿ, ಚಳುವಳಿಯನ್ನು ಮುಂದೆ ತೆಗೆದುಕೊಂಡು ಹೋಗುವ ಕೆಲಸದ ಜವಾಬ್ದಾರಿಯನ್ನು ನಿರ್ವಹಿಸಲು ನಾನು ಪ್ರಮಾಣಿಕವಾಗಿ ಕೆಲಸ ಮಾಡುತ್ತೇನೆ. ಪ್ರಸಕ್ತ ರಾಜಕೀಯ ವಾತಾವರಣದಲ್ಲಿ ಇದಕ್ಕೆ ಹಲವಾರು ಅಡೆ ತಡೆಗಳಿವೆ. ಆ ಕೆಲಸವನ್ನು ನಾವೆಲ್ಲ ಸೇರಿ ಮಾಡಬೇಕಿದೆ. ಹೊಸ ಜನಪರವಾದ ಪರ್ಯಾಯ ರಾಜಕೀಯ ಶಕ್ತಿ ಮೂಡಿ ಬರುವ ಅನಿವಾರ್ಯತೆ ಇದೆ.

ಜನರಿಗಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅವರು ನಮ್ಮ ಜೊತೆ ನಿಲ್ಲುತ್ತಾರೆ ಎಂಬುದು ನನ್ನ 41 ವರ್ಷಗಳ ಸಾರ್ವಜನಿಕ ಜೀವನದ ಅನುಭವ. ಹಳ್ಳಿಗಳು, ಊರುಗಳ ಮನೆ ಮನೆಗಳಿಗೆ ತೆರಳಿದಾಗ ಚಿಕ್ಕ ಬಳ್ಳಾಪುರದ ನಾಲ್ಕೂ ತಾಲ್ಲೂಕುಗಳ ಜನತೆ ತಾಲ್ಲೂಕುಗಳ ಜನ, ದುಡಿಯುವ ಜನ ಸಮ್ಮೇಳನದ ಯಶಸ್ಸಿಗೆ ಬೆಂಬಲ ಕೊಟ್ಟಿದ್ದಾರೆ. ಗ್ರಾಮದಲ್ಲಿ ಅಲೆ ಮಾರಿ ಜನ ನಮ್ಮನ್ನು ಅಡ್ಡ ಹಾಕಿ ನಮ್ಮ ಬಳಿ ಹಣವನ್ನೇಕೆ ಕೇಳಲಿಲ್ಲ, ಈ ಪಕ್ಷ ನಮ್ಮದು, ನಾವು ಹಣ ಕೊಡುತ್ತೇವೆ ಎಂದು ಹಣ ಕೊಟ್ಟಿದ್ದಾರೆ.

ಜಿಲ್ಲೆಯಲ್ಲಿ ನಿವೇಶನ ಹೋರಾಟದಲ್ಲಿ ಭಾಗವಹಿಸಿದ 80 ವರ್ಷದ ಮುದುಕಿ ಇತ್ತೀಚೆಗೆ ಮನೆಯಲ್ಲಿ ತೀರಿಕೊಂಡಾಗ, ಪಕ್ಕಕ್ಕೆ ಹೊರಳಿಸಿದರೆ ತಲೆಯ ಬಳಿ ಕೆಂಬಾವುಟ ಇತ್ತಂತೆ. ಸಿಪಿಐ(ಎಂ) ಪಕ್ಷಕ್ಕೆ ಇದು ಹೆಮ್ಮೆಯ ವಿಚಾರ. ಇವರು ನಮ್ಮವರು ಎಂಬ ಭಾವನೆ ಜನರ ಮನಸ್ಸಿನಲ್ಲಿ ಬರುವಂತೆ ಕೆಲಸ ಮಾಡಬೇಕು. ಅದೇ ಚಳುವಳಿಯ ಮುನ್ನಡೆಯ ದಾರಿ ಎಂದು ಕಾಂ. ಜಿ.ವಿ. ಶ್ರೀರಾಮ ರೆಡ್ಡಿ ಹೇಳಿದರು. ಸಮ್ಮೇಳನ ಯಶಸ್ವಿಗೊಳಿಸಲು ದುಡಿದ ಸಂಗಾತಿಗಳಿಗೆ ಸ್ವಾಗತ ಸಮಿತಿಯ ಪರವಾಗಿ ಎಂ.ಪಿ.ಮುನಿವೆಂಕಟಪ್ಪ ಕೊನೆಯಲ್ಲಿ ಧನ್ಯವಾದ ಸಲ್ಲಿಸಿದರು.



ಅಖಿಲ ಭಾರತ ಮಹಾಧಿವೇಶನಕ್ಕೆ ಆಯ್ಕೆಗೊಂಡ ಪ್ರತಿನಿಧಿಗಳು

1. ಜಿ.ವಿ.ಶ್ರೀರಾಮರೆಡ್ಡಿ
2. ಬಿ.ಮಾಧವ
3. ಎಸ್.ವೈ.ಗುರುಶಾಂತ್
4. ಎಸ್.ಪ್ರಸನ್ನಕುಮಾರ್
5. ಕೆ.ಪ್ರಕಾಶ್
6. ಕೆ.ಎಸ್.ಲಕ್ಷ್ಮಿ
7. ಎಸ್.ವರಲಕ್ಷ್ಮಿ
8. ಕೆ.ಮಹಾಂತೇಶ್
9. ಶಾಂತರಾಮ ಎಸ್ ನಾಯಕ್
10. ಯು.ಬಸವರಾಜ

ಪರ್ಯಾಯ ಪ್ರತಿನಿಧಿಗಳು

1. ವಸಂತ ಆಚಾರಿ
2. ಎಂ.ಪಿ.ಮುನಿವೆಂಕಟಪ್ಪ

ಹಸಿವು, ಅಪೌಷ್ಟಿಕತೆಯ ತಾಂಡವ

ಪುಟ 7 ರಿಂದ.........

ಇಳಿಕೆ ಎನ್‌ಎಫ್‌ಹೆಚ್‌ಸಿ-3 ವರದಿ ಮಾಡಿದ ಇಳಿಕೆ ದರಗಿಂತ ಉತ್ತಮವಾಗಿದೆ" ಎಂದಿದ್ದಾರೆ. ಆದರೂ ಅವರು ಮುಂದುವರೆದು "ನನಗೆ ಆತಂಕ ಉಂಟುಮಾಡುವಂತದ್ದು, ಎಲ್ಲ ಪ್ರಜ್ಞಾವಂತ ನಾಗರಿಕರಿಗೂ ಆತಂಕ ಉಂಟುಮಾಡಬೇಕಾಗಿರುವಂತದ್ದು, ಈಗಲೂ ನಮ್ಮ 42ಶೇ. ಮಕ್ಕಳು ಕಡಿಮೆ ತೂಕ ಹೊಂದಿದ್ದಾರೆ ಎಂಬುದು. ಇದು ಯಾವ ರೀತಿಯಲ್ಲೂ ಒಪ್ಪತಕ್ಕ ಸಂಗತಿ ಅಲ್ಲ" ಎಂದೂ ಸೇರಿಸಿದರು.

ತಮಾಷೆಯ ಸಂಗತಿಯೆಂದರೆ, ಪ್ರಧಾನ ಮಂತ್ರಿಗಳು ಭಾರತೀಯ ಪೌಷ್ಟಿಕತೆಯ ಸವಾಲುಗಳನ್ನು ಕುರಿತ ರಾಷ್ಟ್ರೀಯ ಮಂಡಳಿಯ ಮುಖ್ಯಸ್ಥರು ಕೂಡ. ಸರಕಾರ ಈ ಪಿಡುಗನ್ನು ಎದುರಿಸಲು ಕೈಗೊಳ್ಳುವುದಾಗಿ ಹೇಳಿರುವ ವಿವಿಧ ಕ್ರಮಗಳಲ್ಲಿ ಐಸಿಡಿಎಸ್(ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು)ನ್ನು ಸಾರ್ವತ್ರೀಕರಿಸುವುದು ಕೂಡ ಸೇರಿದೆ. ಆದರೆ ಇದನ್ನು ಸಾರ್ವತ್ರೀಕರಿಸಲು ಹೊರಟಿರುವುದು ಅದು ತನ್ನ ಸ್ವಂತ ಸಂಕಲ್ಪದಿಂದ ಅಲ್ಲ, ಬದಲಾಗಿ, ಸುಪ್ರಿಂ ಕೋರ್ಟಿನ ನಿರ್ದೇಶನದ ಪ್ರಕಾರ. ಸುಪ್ರಿಂ ಕೋರ್ಟ್ ನಿರ್ದೇಶನವಿದ್ದರೂ, ಇದೇ ಪ್ರಧಾನ ಮಂತ್ರಿಗಳ ಉಸ್ತುವಾರಿಯಲ್ಲಿರುವ ಐಸಿಡಿಎಸ್‌ನಲ್ಲಿ ದೇಶಾದ್ಯಂತ ಸೂಪರ್‌ವೈಸರುಗಳ ಹುದ್ದೆಗಳಲ್ಲಿ ಮೂರನೇ ಒಂದರಷ್ಟು ಹುದ್ದೆಗಳು ಇನ್ನೂ ಕೂಡ ಖಾಲಿಯಾಗೇ ಉಳಿದಿವೆ. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕೇಂದ್ರಗಳದ್ದು ನಿರ್ಣಾಯಕ ಪಾತ್ರ ಆದರೆ ಒಟ್ಟು ಸುಮಾರು 14 ಲಕ್ಷ ಅಂಗನವಾಡಿ ಕೇಂದ್ರಗಳಲ್ಲಿ 1,10,000 ದಷ್ಟು ಈಗಲೂ ಕೆಲಸ ಮಾಡುತ್ತಿಲ್ಲ. ಹೆಚ್ಚಿನ ಅಂಗನವಾಡಿ ಕೇಂದ್ರಗಳ ಪರಿಸ್ಥಿತಿಗಳು ಶೋಚನೀಯವಾಗಿವೆ. ಹಲವಕ್ಕೆ (ಬಿಹಾರದಲ್ಲಿ 90ಶೇ. ಕೇಂದ್ರಗಳಿಗೆ) ಸ್ವಂತ ಕಟ್ಟಡಗಳಿಲ್ಲದೆ, ಎಲ್ಲಿ ಖಾಲಿ ಸ್ಥಳಗಳಿವೆಯೋ ಅಲ್ಲಿ ಕೆಲಸ ಮಾಡುವಂತಹ ಪರಿಸ್ಥಿತಿಯಲ್ಲಿವೆ. ಅರ್ಧಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ಯಾವುದೇ ಶೌಚಾಲಯ ಅಥವ ಕುಡಿಯುವ ನೀರಿನ ಸೌಕರ್ಯಗಳಿಲ್ಲ. ಈ ಸರಕಾರವನ್ನು ಮೆಟ್ಟಿಕೊಂಡಂತಿರುವ 'ಪಿಪಿಪಿ'(ಸಾರ್ವಜನಿಕ-ಖಾಸಗಿ ಪಾಲುದಾರಿಕೆ) ಮಂತ್ರದಿಂದಾಗಿ ಈ ಕೇಂದ್ರಗಳಿಗೆ ಆಹಾರ ಪೂರೈಕೆ ಖಾಸಗೀಕರಣಗೊಂಡಿದೆ. ಇದರ ಫಲಿತಾಂಶವೆಂದರೆ, ಅತಿ ಕೆಟ್ಟ ಗುಣಮಟ್ಟದ ಆಹಾರ ಪೂರೈಕೆ, ಅನಿಯಮಿತ ಪೂರೈಕೆ ಮತ್ತು ಪೂರೈಕೆಯ ಪ್ರಮಾಣದ ಪರೀಕ್ಷಣೆಯೂ ಇಲ್ಲದಾಗಿದೆ.

ಅಮಾನವೀಯ ಸ್ಥಿತಿ-ಗತಿ

ಎಷ್ಟೇ ಸಾರ್ವಜನಿಕ ಪ್ರತಿಭಟನೆಗಳು ನಡೆದರೂ, ಸಂಸತ್ತಿನಲ್ಲೂ ಚರ್ಚೆಗಳು ನಡೆದರೂ, ಅಂಗನವಾಡಿ ಕಾರ್ಯಕರ್ತೆಯರ ಪರಿಸ್ಥಿತಿಗಳು ಅತ್ಯಂತ ಕೆಟ್ಟದಾಗಿದೆ. ಅವರ ಕೆಲಸದ ಪರಿಸ್ಥಿತಿಗಳು ಮಾನವ ಜೀವಿಗಳಿಗೆ ತಕ್ಕುದಾಗಿಯೂ ಇಲ್ಲ. ಕಾರ್ಯಕರ್ತೆಯರಿಗೆ ತಿಂಗಳಿಗೆ 1500 ರೂ. ಮತ್ತು ಸಹಾಯಕಿಯರಿಗೆ 750 ರೂ. ಮಾತ್ರ.- ಹೀಗಿದೆ ಅಪೌಷ್ಟಿಕತೆಯ ವಿರುದ್ಧ ಹೋರಾಟದ ಮತ್ತು ನಮ್ಮ ಮಕ್ಕಳನ್ನು ಬೆಳೆಸುವ, ಪೋಷಿಸುವ ಜವಾಬ್ದಾರಿಗಳಿರುವ ನಮ್ಮ ಜನಗಳ ಶೋಚನೀಯ ಪರಿಸ್ಥಿತಿ.

ಆದರೂ ಸರಕಾರ ಈ ವಲಯವನ್ನು ನಿರ್ಲಕ್ಷಿಸುತ್ತಲೇ ಇದೆ. ದೇಶದಲ್ಲಿ ಐಸಿಡಿಎಸ್‌ನ ಸಾರ್ವತ್ರೀಕರಣಕ್ಕೆ ಬೇಕಾದ ಹಣಕಾಸು ಸಂಪನ್ಮೂಲಗಳನ್ನು ಕೂಡ ಕೊಟ್ಟಿಲ್ಲ. ಭಾರತ ಸಾರ್ವಜನಿಕ ಆರೋಗ್ಯಕ್ಕೆ ಖರ್ಚು ಮಾಡುವ ಹಣ ನಮ್ಮ ಜಿಡಿಪಿಯ ಒಂದು ಶೇಕಡಾಕ್ಕಿಂತಲೂ ಕಡಿಮೆ-ನಿಜಕ್ಕೂ ಶೋಚನೀಯ ಸಂಖ್ಯೆ. ಆರೋಗ್ಯ ಬಜೆಟಿಗೆಂದು ಕೊಟ್ಟಿರುವುದು ಕೇವಲ ರೂ.22,300 ಕೋಟಿ. 2ಜಿ ತರಂಗಾಂತರ ಹಗರಣದಲ್ಲಿ ಇರುವ ಹಣವೇ ಇದರ ಎಂಟು ಪಟ್ಟು.

ಪ್ರಧಾನ ಮಂತ್ರಿಗಳು ಭಾರತದ ಈ ನಿರಾಶಾದಾಯಕ ಭವಿಷ್ಯವನ್ನು ಬದಲಿಸಬೇಕು ಎಂದು ನಿಜವಾಗಿಯೂ ಗಂಭೀರವಾಗಿ ಯೋಚಿಸುತ್ತಿದ್ದರೆ, ಪ್ರಾಥಮಿಕ ಆರೋಗ್ಯ ರಕ್ಷಣೆಯನ್ನು ಎಲ್ಲರಿಗೂ ಅನ್ವಯವಾಗುವಂತೆ ಸಾರ್ವತ್ರೀಕರಿಸಬೇಕು. ಇದಾಗಬೇಕಾದರೆ, ನಮ್ಮ ಜಿಡಿಪಿಯ ಕನಿಷ್ಟ 3ಶೇ. ವನ್ನು ಆರೋಗ್ಯ ರಕ್ಷಣೆಗೆ ಕೊಡಬೇಕಾಗುತ್ತದೆ. ಸದ್ಯಕ್ಕೆ ಇದಕ್ಕಿಂತ ಹೆಚ್ಚು ಮೊತ್ತದ ಕಾನೂನಾತ್ಮಕವಾಗಿ ವಸೂಲಿ ಮಾಡಬೇಕಾದ ತೆರಿಗೆ ಹಣವನ್ನು ಈ ಸರಕಾರ ವಸೂಲು ಮಾಡದೆ ಬಿಟ್ಟು ಕೊಡುತ್ತಿದೆ. ಕಳೆದ ಮೂರು ವರ್ಷಗಳಲ್ಲೇ ಹೀಗೆ ಬಿಟ್ಟುಕೊಟ್ಟ ಆದಾಯದ ಮೊತ್ತ ರೂ. 14,28,028 ಕೋಟಿ ರೂ.ಗಳು. ಇದರಲ್ಲಿ ರೂ.3,63,875 ಕೋಟಿ ಕಾರ್ಪೊರೇಟುಗಳಿಗೆ ಮತ್ತು ಶ್ರೀಮಂತರಿಗೆ ರಿಯಾಯ್ತಿಗಳ ರೂಪದಲ್ಲಿ ಕೊಡಲಾಗಿದೆ.

ಆದ್ದರಿಂದ ಶ್ರೀಮಂತರನ್ನು ಶ್ರೀಮಂತರಾಗಿಸುವ, ಬಡವರನ್ನು ದಾರಿದ್ರ್ಯಕ್ಕೆ ತಳ್ಳುವ ನವ-ಉದಾರವಾದಿ 'ಸುಧಾರಣೆಗಳ' ಈ ದಿಕ್ಕನ್ನು ಬದಲಿಸದೆ, ನಮ್ಮ ಜನಗಳ ಆರೋಗ್ಯವನ್ನು, ಆಮೂಲಕ ನಮ್ಮ ದೇಶವನ್ನು ಉತ್ತಮ ಪಡಿಸುವಲ್ಲಿ ಗಮನಾರ್ಹ ಮುನ್ನಡೆ ಸಾಧ್ಯವಿಲ್ಲ. ಎರಡು ಭಾರತಗಳ ನಡುವಿನ ಕಂದರವನ್ನು ಹೆಚ್ಚಿಸುವ ಈಗಿನ ದಿಕ್ಕನ್ನು ಕೈಬಿಡಬೇಕಾಗಿದೆ ಮತ್ತು ಶ್ರೀಮಂತರಿಗೆ ರಿಯಾಯ್ತಿಗಳಾಗಿ ಕೊಟ್ಟ ಹಣವನ್ನು ನಮ್ಮ ಬಹು ಆವಶ್ಯಕವಾದ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಾಗಿ, ಆಮೂಲಕ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಉಂಟು ಮಾಡಲು ಬಳಸಬೇಕು. ಇದೀಗ ನಮ್ಮ ಜನಗಳ ಜೀವನಾಧಾರಗಳನ್ನು, ಅವರ ಸ್ಥಾನಮಾನಗಳನ್ನು, ಅದಕ್ಕಾಗಿ ಅವರ ಆರೋಗ್ಯವನ್ನು ಉತ್ತಮ ಪಡಿಸಲು, ಒಂದು ಉತ್ತಮ ಭಾರತವನ್ನು ಕಟ್ಟಲು ಇರುವ ಏಕೈಕ ಮಾರ್ಗ.

ಅಂತರ ತೊಲಗಿಸಬೇಕು-ಯೆಚೂರಿ

ಪುಟ 8ರಿಂದ ....

ಸರ್ಕಾರದ ರೇಷ್ಮೆ ಆಮದು ನೀತಿಯಿಂದ ಶೇ.50ಕ್ಕೂ ಹೆಚ್ಚು ರೇಷ್ಮೆ ಉತ್ಪಾದಿಸುವ ಕರ್ನಾಟಕ ವಿಶೇಷವಾಗಿ ದಕ್ಷಿಣ ಕರ್ನಾಟಕದ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ ಮುಂತಾದ ಜಿಲ್ಲೆಗಳ ರೈತರು ಅಪಾರವಾದ ನಷ್ಟ ಸಂಕಟಕ್ಕೆ ಈಡಾಗಿದ್ದಾರೆ. ಈ ಸಂಬಂಧ ಆಮದು ಸುಂಕವನ್ನು ಶೇ.31ಕ್ಕೆ ಏರಿಸುವಂತೆ ಒತ್ತಾಯಿಸಿ ಹಲವು ದೊಡ್ಡ ಹೋರಾಟಗಳನ್ನು ಇಲ್ಲಿಯ ರೈತರು ನಡೆಸುತ್ತಿದ್ದರೂ ಗಣನೆಗೆ ತೆಗೆದುಕೊಳ್ಳದೆ ಕೆಲವೇ ಕೆಲವು ದೊಡ್ಡ ಬಂಡವಾಳಶಾಹಿಗಳ ಲಾಭ ಹೆಚ್ಚಳ ಮಾಡುವುದೇ ಮುಖ್ಯವಾಗಿದೆ. ಇಂತಹದೇ ಹೊಸ ಆರ್ಥಿಕ ನೀತಿಗಳನ್ನು ಕಳೆದ 20 ವರ್ಷಗಳಿಂದ ಜಾರಿ ಮಾಡುತ್ತಿದ್ದು ಇದರ ಫಲವಾಗಿ ಹೊಳೆಯುತ್ತಿರುವ ಮತ್ತು ನರಳುತ್ತಿರುವ ಎರಡು ಭಾರತ ಭಾರತ ಸೃಷ್ಟಿಯಾಗಿದೆ. 69 ಬಿಲಿಯಾಧಿಪತಿಗಳು ದೇಶದ ಒಟ್ಟು ಆಂತರಿಕ ವಾರ್ಷಿಕ ಉತ್ಪಾದನೆಯ 1/3 ನೇ ಭಾಗವನ್ನು ಹೊಂದಿದ್ದಾರೆ. ಇನ್ನೊಂದು ಕಡೆ 80 ಕೋಟಿಯಷ್ಟು ಜನ ದಿನಕ್ಕೆ 20 ರೂ.ಗೂ ಕಡಿಮೆ ಆದಾಯದಲ್ಲಿ ಜೀವನ



ಸಾಗಿಸುತ್ತಿದ್ದಾರೆ. ಬಾಂಬೆಯಲ್ಲಿ ಮುಖೇಶ್ ಅಂಬಾನಿ 4 ಸಾವಿರ ಕೋಟಿ ಖರ್ಚು ಮಾಡಿ ಮನೆ ನಿರ್ಮಿಸಿಕೊಂಡಿದ್ದಾರೆ. ಕೋಟ್ಯಾನುಕೋಟಿ ಜನ ನಿರ್ವಸಿತರಾಗಿ ಬದುಕುವ ಸ್ಥಿತಿ ನಿರ್ಮಾಣ ಗೊಂಡಿದೆ. ಈ ಅಂತರವನ್ನು ಕಡಿಮೆಗೊಳಿಸಲು ಸಿಪಿಐ(ಎಂ) ಮಾತ್ರವೇ ಹೋರಾಟ ಮಾಡುತ್ತಿದೆ.


ಲಕ್ಷ ಲಕ್ಷ ಕೋಟಿಗಳ ಹಣವನ್ನು ಅಪಾರ ಭ್ರಷ್ಟಾಚಾರ ಎಸಗಿ ಕೊಳ್ಳೆ ಹೊಡೆಯಲಾಗುತ್ತಿದೆ. 2ಜಿ ಹಗರಣ ಒಂದರಲ್ಲೇ 1 ಲಕ್ಷ 76 ಸಾವಿರ ಕೋಟಿ ರೂ.ಹಣ ಬಾಚಲಾಗಿದೆ. ಹೀಗಿರುವಾಗ ರೇಷನ್, ಮನೆ-ನಿವೇಶನ ಮುಂತಾದ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಹಣವಿಲ್ಲ ಎಂದು ಸರ್ಕಾರಗಳು ಹೇಳುತ್ತಿವೆ. ಭ್ರಷ್ಟಾಚಾರ ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡುವ ಸಾಧನವಾಗಿ ಖಾಸಗಿ ಸಂಸ್ಥೆ, ವ್ಯಕ್ತಿಗಳ ತಿಜೋರಿಯನ್ನು ತುಂಬಿಸುತ್ತಿದೆ. ಈ ಭ್ರಷ್ಟಾಚಾರದ ನಿಗ್ರಹಕ್ಕೆ ಪ್ರಬಲವಾದ ಲೋಕಪಾಲ್ ಶಾಸನಬೇಕು ಎಂದು ದೇಶದಲ್ಲೆಡೆ ಒತ್ತಾಯ ಬಂದರೂ ಈ ಸಂಬಂಧ ಕೇಂದ್ರ ರೂಪಿಸಿರುವ ಶಾಸನ ದುರ್ಬಲವಾಗಿದೆ. ಲೋಕಪಾಲರನ್ನು ಸರ್ಕಾರವೇ ನೇಮಕ ಮಾಡುವ ಅಂಶ ಲೋಕಪಾಲ ಸಂಸ್ಥೆಯ ಸ್ವತಂತ್ರವಾದ ಕಾರ್ಯಚರಣೆಗೆ ಪ್ರಮುಖ ಅಡ್ಡಿಯಾಗಿದೆ. ಬಿಜೆಪಿ ಲೋಕಸಭೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಿದೆ. ಆದರೆ ತಾನು ಅಧಿಕಾರ ನಡೆಸುತ್ತಿರುವ ಕರ್ನಾಟಕ ರಾಜ್ಯವು ಸೇರಿದಂತೆ ಎಲ್ಲಾ ಕಡೆ ಭ್ರಷ್ಟತೆಯಲ್ಲಿ ತೊಡಗಿದೆ. ಗಣಿಲೂಟಿಗೆ ಇಡೀ ದೇಶದಲ್ಲೇ ಕುಖ್ಯಾತಿ ಪಡೆದಿದೆ. ಈ ಗಣಿ ಲೂಟಿ ನಿಲ್ಲಬೇಕಾದರೆ ಗಣಿ ಸಂಪತ್ತಿನ ರಾಷ್ಟ್ರೀಕರಣ ಒಂದೇ ದಾರಿ ಎಂದು ತಿಳಿಸಿದರು.


ಈ ರೀತಿ ಕಾಂಗ್ರೆಸ್, ಬಿಜೆಪಿ ಸರ್ಕಾರಗಳ ಆರ್ಥಿಕ ನೀತಿ ಒಂದೇ ಆಗಿರುವುದರಿಂದ ಈ ಎರಡಕ್ಕೂ ಬದಲಿಯಾದ ಕಾರ್ಯಕ್ರಮ ಆಧಾರಿತ ಜನಪರ ಪರ್ಯಾಯಕ್ಕೆ ಸಿಪಿಐ(ಎಂ) ಶ್ರಮಿಸುತ್ತಿದೆ. ಇತ್ತೀಚಿನ ಚುನಾವಣೆಗಳಲ್ಲಿ ಆದ ಹಿನ್ನಡೆಯನ್ನು ಜಾಗತೀಕರಣ ನೀತಿಗಳಿಗೆ ಸಿಕ್ಕ ಮನ್ನಣೆ ಎಂದು ಬೂರ್ಜ್ವಾ ಮಾಧ್ಯಮಗಳು ಅಪಪ್ರಚಾರ ಮಾಡುತ್ತಿವೆ. ಮನುಷ್ಯನ ರಕ್ತ ಎಲ್ಲಿಯವರೆಗೆ ಕೆಂಪು ಆಗಿರುತ್ತದೋ ಅಲ್ಲಿಯವರೆಗೂ ಕೆಂಪು ಬಾವುಟ ಚಿರಾಯುವಾಗಿರುತ್ತದೆ. ಸಮಾಜವಾದವೇ ಭವಿಷ್ಯ, ಇದೇ ನಿಜವಾದ ಪರ್ಯಾಯ ಎಂದು ಅಪಾರ ಜನಸ್ತೋಮದ ಚಪ್ಪಾಳೆಯ ಸಹಮತದೊಂದಿಗೆ ಘೋಷಿಸಿದರು.


20ನೇ ರಾಜ್ಯ ಸಮ್ಮೇಳನದಲ್ಲಿ ಆಯ್ಕೆಯಾದ ರಾಜ್ಯ ಸಮಿತಿ ಸದಸ್ಯರು


33 ಸದಸ್ಯರ ರಾಜ್ಯ ಸಮಿತಿಯನ್ನು ಸಮ್ಮೇಳನ ಚುನಾಯಿಸಿತು (2 ಸ್ಥಾನ ಖಾಲಿ) ಕಾರ್ಯದರ್ಶಿ ಮಂಡಳಿಯನ್ನು ನಂತರ ಆಯ್ಕೆ ಮಾಡಲಾಗುವುದು. ಈ ಹಿನ್ನೆಲೆಯಲ್ಲಿ ಹಿಂದಿನ ಕಾರ್ಯದರ್ಶಿ ಮಂಡಳಿ ಹಂಗಾಮಿಯಾಗಿ ಅಲ್ಲಿಯವರೆಗೆ ಜವಾಬ್ದಾರಿ ನಿರ್ವಹಿಸಲಿದೆ.


ಜಿ.ವಿ.ಶ್ರೀರಾಮರೆಡ್ಡಿ–ಕಾರ್ಯದರ್ಶಿ


ವಿ.ಜೆ.ಕೆ.ನಾಯರ್



ಜಿ.ಎನ್.ನಾಗರಾಜ್



ಕೆ.ಆರ್.ಶ್ರೀಯಾನ್



ಬಿ.ಮಾಧವ



ನೀಲಾ ಕೆ.



ಎಸ್.ಪ್ರಸನ್ನಕುಮಾರ್


ನಿತ್ಯಾನಂದಸ್ವಾಮಿ


ಮಾರುತಿ ಮಾನ್ಪಡೆ.


ಜಿ.ಸಿ.ಬಯ್ಯಾರೆಡ್ಡಿ



ಎಸ್.ವೈ.ಗುರುಶಾಂತ


ಕೆ.ಶಂಕರ್



ವರಲಕ್ಷ್ಮಿ ಎಸ್.



ವಿಮಲ


ಬಾಲಕೃಷ್ಣಶೆಟ್ಟಿ


ಅರ್ಜುನನ್ ಜಿ.



ಶಾಂತರಾಮ ನಾಯಕ


ಯು.ಬಸವರಾಜ



ಮೀನಾಕ್ಷಿ ಸುಂದರಂ


ಗಾಂಧಿನಗರ ನಾರಾಯಣಸ್ವಾಮಿ



ಎಂ.ಪುಟ್ಟಮಾದು



ಸಯ್ಯದ್ ಮುಜೀಬ್


ವಸಂತ ಆಚಾರಿ


ಭೀಮಸಿ ಕಲಾದಗಿ



ಕೆ.ಎನ್.ಉಮೇಶ


ಜೆ.ಬಾಲಕೃಷ್ಣಶೆಟ್ಟಿ


ಪ್ರಕಾಶ್ ಕೆ.


ಅಮಾನುಲ್ಲಾ ಖಾನ್


ಕೆ.ಎಸ್.ಲಕ್ಷ್ಮಿ


ಎಂ.ಪಿ. ಮುನಿವೆಂಕಟಪ್ಪ


ಸಿದ್ದಗಂಗಪ್ಪ


ಮಹಾಬಲ ವಡೇರಹೋಬಳಿ


ಆರ್.ಎಸ್.ಬಸವರಾಜು

ಜಗದಗಲ

ಶರತ್‌ಚಂದ್ರ

ಸಾಮ್ರಾಜ್ಯಶಾಹಿಯ ವಿರುದ್ಧ ಇನ್ನೊಂದು ಗೋಲು

ಇಡೀ ಅಮೆರಿಕ (ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡ ಸೇರಿದಂತೆ) ತನ್ನ 'ಹಿತ್ತಲು' ಎಂಬ ಉತ್ತರ ಅಮೆರಿಕದ ದೊಡ್ಡಣ್ಣನ ವಿರುದ್ಧ ಇನ್ನೊಂದು ಗೋಲು ಹೊಡೆದಿದೆ. ಲ್ಯಾಟಿನ್ (ದಕ್ಷಿಣ ಮತ್ತು ಮಧ್ಯ ಅಮೆರಿಕಾ, ಕೆರ್ರಿಬಿಯನ್ ದ್ವೀಪಗಳು ಸೇರಿದ) ಅಮೆರಿಕದ 33 ದೇಶಗಳು ಸೆಲಾಕ್ (ಸಿ.ಇ.ಎಲ್.ಎ.ಸಿ.: ಕಮ್ಯುನಿಟಿ ಆಫ್ ಲ್ಯಾಟಿನ್ ಅಮೆರಿಕನ್ ಅಂಡ್ ಕ್ಯಾರಿಬಿಯನ್ ಸ್ಟೇಟ್ಸ್) ಎಂಬ ಹೊಸ ಪ್ರಾದೇಶಿಕ ಸಂಘಟನೆ ಕಟ್ಟಿಕೊಂಡಿದೆ. ಈ ಸಂಘಟನೆಯಲ್ಲಿ ಉತ್ತರ ಅಮೆರಿಕಾದ ಯು.ಎಸ್.ಎ. ಮತ್ತು ಕೆನಡಾಗಳನ್ನು ಆಹ್ವಾನಿಸಲಾಗಲಿಲ್ಲ. ಆದರೆ ಮೆಕ್ಸಿಕೊ, ಕ್ಯೂಬಾ ಮತ್ತು ಎಲ್ಲಾ ಕೆರ್ರಿಬಿಯನ್ ದ್ವೀಪಗಳ ದೇಶಗಳು ಇದರ ಸದಸ್ಯರು. ಈ ಸಂಘಟನೆ ಈ ವರೆಗೆ ಎರಡೂ ಅಮೆರಿಕನ್ ಖಂಡಗಳ ದೇಶದ ಸಂಘಟನೆಯಾಗಿದ್ದ ಒ.ಎ.ಎಸ್. (ಆರ್ಗ್ಯನೈಸೇಶನ್ ಆಫ್ ಅಮೆರಿಕನ್ ಸ್ಟೇಟ್ಸ್) ಗೆ ಬದಲಿಯಾಗಿ ಹೊಮ್ಮಿದೆ. ಒ.ಎ.ಎಸ್. ಸಂಘಟನೆ ಯು.ಎಸ್.ಎ. ಅಧಿಪತ್ಯದಲ್ಲಿದ್ದು ಅದರ ಮೂಗಿನ ನೇರಕ್ಕೆ ನಡೆಯುತ್ತಿತ್ತು. ಯು.ಎಸ್.ಎ. ವಿರುದ್ಧ ಮಾತಾಡಿದ ಯಾವುದೇ ದೇಶದ ಸದಸ್ಯತ್ವದಿಂದ ಅವಮಾನತು ಮಾಡಲಾಗುತ್ತಿತ್ತು. ಕ್ಯೂಬಾವನ್ನು 1962 ರಿಂದ 2009 ರ ವರೆಗೆ ಅಮಾನತಿನಲ್ಲಿ ಇಡಲಾಗಿತ್ತು.

ಮೆಕ್ಸಿಕೊ, ಬ್ರೆಜಿಲ್, ವೆನೆಜುವೇಲಾ, ಅರ್ಜೆಂಟಿನಾ, ಕ್ಯೂಬಾ, ಬೊಲಿವಿಯ, ಕೊಲಂಬಿಯಾಗಳ ಅಧ್ಯಕ್ಷರುಗಳು ಸೇರಿದಂತೆ 33 ದೇಶಗಳ ನಾಯಕರುಗಳು ಸಂಘಟನೆಯ ಸ್ಥಾಪನಾ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ವೆನೆಜುವೇಲಾ ಅಧ್ಯಕ್ಷ ಚವೇಝ್ ಮಾತನಾಡುತ್ತಾ 'ಇನ್ನೂರು ವರ್ಷಗಳ ಕಾಲ ಹೊರಿಸಿದ ಮನ್ರೋ ನೀತಿ ಕೊನೆಗೊಂಡಿದೆ. ಮನ್ರೋ ನೀತಿ ಅಮೆರಿಕ ಯಾಂಕಿಗಳದ್ದು ಎಂದು ಸಾರಿತ್ತು. ಅದು ಇನ್ನು ಮುಂದೆ ಸಾಗದು' ಎಂದು ಮಾರ್ಮಿಕವಾಗಿ ಹೇಳಿದರು. ಬೊಲಿವಿಯ ಅಧ್ಯಕ್ಷ ಇವೋ ಮೊರಾಲೆಸ್ 'ಸೆಲಾಕ್' ಲ್ಯಾಟಿನ್ ಅಮೆರಿಕದ ವಿಮೋಚನೆಯ ಅಸ್ತ್ರ ಎಂದು ಹೇಳಿದ್ದಾರೆ. 500 ವರ್ಷಗಳ (ಕೊಲಂಬಸ್ ಅಮೆರಿಕ ಕಂಡುಹಿಡಿದದ್ದರ ಬೆನ್ನಹಿಂದೆ ಬಂದ ವಸಾಹತುಶಾಹಿಗಳ ಆಕ್ರಮಣದ ವಿರುದ್ಧ) ಪ್ರತಿರೋಧ ಮತ್ತು 200 ವರ್ಷಗಳ ಸ್ವಾತಂತ್ರ್ಯದ ನಂತರ ನಾವು ನಮ್ಮ ವಿಮೋಚನೆಗಾಗಿ ಒಂದಾಗಿದ್ದೇವೆ. ಸಾಮ್ರಾಜ್ಯಶಾಹಿ ಯಜಮಾನಿಕೆಯಿಂದ ಮುಕ್ತರಾಗಿದ್ದೇವೆ. ಈ ಖಂಡದ ಸಂಪತ್ತು ಬಳಸಿ ಶಕ್ತಿಮೂಲ, ಆರ್ಥಿಕ ಬೆಳವಣಿಗೆ, ಶಿಕ್ಷಣ, ಆರೋಗ್ಯ, ಪರಿಸರ ಸಮತೋಲನದ ಸವಾಲುಗಳನ್ನು ಒಟ್ಟಾಗಿ ಎದುರಿಸಿ ಪರಿಹರಿಸಲು ಪ್ರಯತ್ನಿಸುತ್ತೇವೆ. ಎಂದೂ ಮೊರಾಲೆಸ್ ಘೋಷಿಸಿದ್ದಾರೆ.

ಯು.ಎಸ್.ಎ. ಮನ್ರೋ ನೀತಿಯ ಮೂಲಕ ಎರಡೂ ಅಮೆರಿಕ ಖಂಡಗಳಲ್ಲಿ ತನ್ನ 'ಹಿತಾಸಕ್ತಿ'ಗಳಿಗೆ ಧಕ್ಕೆ ಬಂದಾಗ ಮಿಲಿಟರಿ ಮಧ್ಯಪ್ರವೇಶದ ಹಕ್ಕು ತನಗೆ ತಾನು ಕೊಟ್ಟುಕೊಂಡಿತ್ತು. ಅದನ್ನು ಅದರ ಎಲ್ಲಾ ಮಿಲಿಟರಿ ಬಲ ಬಳಸಿ ಜಾರಿ ಗೊಳಿಸಿತು ಕೂಡಾ. ತನ್ನ ವಿರುದ್ಧ ಜನಪ್ರಿಯ ಚಳುವಳಿಗಳು ಪಕ್ಷಗಳು ದನಿ ಎತ್ತಿದಾಗ, ಚುನಾಯಿತ ಸರ್ಕಾರಗಳನ್ನು ರಚಿಸಿದಾಗ ಮಿಲಿಟರಿ ಬಲ ಬಳಸಿ ಹತ್ತಿಕ್ಕಿದೆ. ತನ್ನ ಬಾಲಬಡುಕ ಮಿಲಿಟರಿ ಅಧಿಕಾರಿಗಳನ್ನು ಅಥವಾ ಸರ್ವಾಧಿಕಾರಿಗಳನ್ನು ಅಧಿಕಾರದಲ್ಲಿ ಕೂರಿಸಿದೆ. ಇಡೀ ಖಂಡದ ಸಂಪನ್ಮೂಲಗಳ ಲೂಟಿ ಮಾಡಿದೆ.

ಸಮ್ಮೇಳನದ ನಿರ್ಣಯ –ಕೋಮುವಾದವನ್ನು ಹಿಮ್ಮೆಟ್ಟಿಸಲು ಕರೆ

ಫ್ಯಾಶಿಸ್ಟ್ ವಾದರಿಯ ಹಿಂದುತ್ವದ ಆಧಾರದಲ್ಲಿ ಜನತೆಯನ್ನು ವಿಭಜಿಸುತ್ತಿರುವ ಕೋಮುವಾದೀ ಧಾಳಿಗಳು ಹೆಚ್ಚುತ್ತಿರುವ ಬಗ್ಗೆ ಸಿಪಿಐ(ಎಂ) 20ನೇ ರಾಜ್ಯ ಸಮ್ಮೇಳನವು ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ.

ತೀವ್ರತರ ಕೋಮು ಗಲಭೆಗಳ ಮೂಲಕ ಜನತೆಯಲ್ಲಿ ವಿಭಜನೆ ತಂದ ಪರಿಣಾಮವೂ ಸೇರಿದಂತೆ ಹಲವು ವಂಚನೆಗಳ ಭರವಸೆ ನೀಡಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ರಾಜ್ಯದ ಬಿಜೆಪಿ ಸರ್ಕಾರ ತನ್ನ ಭ್ರಷ್ಟ ಜನವಿರೋಧಿ ದುರಾಡಳಿತದ ಪರಿಣಾಮವಾಗಿ ಜನತೆಯಲ್ಲಿ ಅತೃಪ್ತಿಯು ಬೆಳೆಯುತ್ತಿದ್ದು, ಅದನ್ನು ಹಾದಿತಪ್ಪಿಸಲು ಕೋಮುಗಲಭೆಗೆ ತಿರುಗಿಸಲು ಮತ್ತು ಕೋಮುವಾದಿ ವಿಭಜನೆಯ ಮೂಲಕ ರಾಜಕೀಯ ಬಲ ಮರು ಕ್ರೋಢಿಕರಿಸಲು ಮತ್ತೇ ತೀವ್ರ ಕಾರ್ಯಾಚರಣೆಗೆ ಆರ್.ಎಸ್.ಎಸ್. ಇಳಿದಿರುವುದನ್ನು ಸಮ್ಮೇಳನವು ಗಮನಿಸುತ್ತದೆ.

ಈ ಹಿಂದೆ 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಪೂರ್ವದಲ್ಲಿ ಮತ್ತು 2009ರ ಲೋಕಸಭಾ ಚುನಾವಣೆಗೆ ಮೊದಲು ಸಂಘಪರಿವಾರವು ವ್ಯಾಪಕ ಕೋಮುಗಲಭೆ ನಡೆಸಿತು. ಕರ್ನಾಟಕವನ್ನು ಹತ್ಯಾಕಾಂಡದ ಮೋದಿಯ ಗುಜರಾತ್‌ನ್ನಾಗಿಸುವುದಾಗಿ ಬಹಿರಂಗವಾಗಿ ಘೋಷಿಸಿತು. ಬಾಬಾ ಬುಡನ್‌ಗಿರಿಯನ್ನು ದಕ್ಷಿಣದ 'ಅಯೋಧ್ಯೆ'ಯನ್ನಾಗಿಸುವ ದಿಕ್ಕಿನಲ್ಲಿ ಧಾಳಿಗಳು ಮುಂದುವರಿದವು. ಮತ್ತೊಂದೆಡೆ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧಾರ್ಮಿಕ ಪ್ರಾರ್ಥನಾ ಮಂದಿರಗಳು ಮತ್ತು ಈ ಅಲ್ಪಸಂಖ್ಯಾತ ಜನತೆಯ ಮೇಲೆ ಬಜರಂಗದಳ, ವಿಶ್ವ ಹಿಂದೂ ಪರಿಷತ್ ಮುಂತಾದ ಸಂಘಪರಿವಾರದಿಂದ ದಾಳಿಗಳು ನಡೆದವು.ಈ ಧಾಳಿಗಳನ್ನು ತಡೆಯುವ ಬದಲು, ಬಿಜೆಪಿ ಸರ್ಕಾರ ಧಾಳಿಕೋರರಿಗೆ ರಕ್ಷಣೆ ನೀಡಿತು. ಬೆಂಗಳೂರಿನ ಜೆ.ಸಿ.ನಗರದ ಮಸೀದಿಯಲ್ಲಿ ಹಂದಿ ಮಾಂಸ ಹಾಕಿ ಕೋಮುಗಲಭೆ ಹಬ್ಬಿಸುವ ಸಂಚಿನಲ್ಲಿ ಸಿಕ್ಕಿಬಿದ್ದಿದ್ದ, ಮಂಗಳೂರು ಪಬ್ ಒಂದರ ಆವರಣದಲ್ಲಿ ಯುವತಿಯರ ಮೇಲೆ ದಾಳಿ ಮಾಡಿದಂತಹ ನೂರಾರು ಕ್ರಿಮಿನಲ್ ಕೃತ್ಯಗಳ ಮೊಕದ್ದಮೆಗಳನ್ನು ಸರ್ಕಾರ ಹಿಂತೆಗೆದುಕೊಂಡಿತು. ಸೌಹಾರ್ದತೆಯ ಕೇಂದ್ರವಾಗಿರುವ ಬಾಬಾ ಬುಡನ್‌ಗಿರಿಯಲ್ಲಿ 1975ರ ಹಿಂದಿನ ಸ್ಥಿತಿಯನ್ನು ರಕ್ಷಿಸಲು ನಿರ್ದೇಶಿಸಿದ್ದ ನ್ಯಾಯಾಲಯಗಳ ಎಲ್ಲಾ ನಿರ್ದೇಶನಗಳನ್ನು ಧಿಕ್ಕರಿಸಿ ಅದನ್ನು ನಾಶಗೊಳಿಸಿ ಚಾತುವರ್ಣ್ಯದ ವೈಧಿಕ ಕೇಂದ್ರವನ್ನಾಗಿಸಲು ಸತತವಾಗಿ ಯತ್ನಿಸುತ್ತ ಬಂದಿರುವುದನ್ನು ಸಮ್ಮೇಳನವು ಗಂಭೀರವಾಗಿ ಅವಲೋಕಿಸಿ ವಿರೋಧಿಸುತ್ತದೆ.

ಬಿಜೆಪಿ ಸರ್ಕಾರವನ್ನು ಪೂರ್ಣವಾಗಿ ನಿಯಂತ್ರಿಸುತ್ತಿರುವ ಆರ್.ಎಸ್.ಎಸ್. ಸರ್ಕಾರದ ಆಡಳಿತವನ್ನು ಕೋಮುವಾದೀ ಪ್ರಭಾವಕ್ಕೆ ಒಳಗಾಗಿಸುತ್ತಿದೆ. ಕೋಮುಗಲಭೆಗಳು ನಡೆದಲ್ಲಿ ಆಡಳಿತ ಧಾಳಿಗೊಳಗಾದ ಅಲ್ಪಸಂಖ್ಯಾತರ ವಿರುದ್ಧವೇ ಕಾರ್ಯವೆಸಗಿದೆ. ಕ್ರಿಶ್ಚಿಯನ್ನರು ಮತ್ತು ಚರ್ಚ್‌ಗಳ ಮೇಲೆ ನಡೆದ ಧಾಳಿಗಳ ಬಗ್ಗೆ ನ್ಯಾ.ಸೋಮಶೇಖರ್ ಆಯೋಗದ ಮಧ್ಯಂತರ ವರದಿಯು ಭಜರಂಗದಳ–ಸಂಘ ಪರಿವಾರ ಪ್ರಮುಖ ಹೊಣೆಯೆಂದು ಹೇಳಿದ್ದನ್ನೂ, ದಬಾವಣೆ ಮೂಲಕ ವ್ಯತಿರಿಕ್ತ ವರದಿ ಬರುವಂತೆ ಮಾಡಿದ್ದಲ್ಲದೇ ಅಪರಾಧಿಗಳನ್ನೇ ಖುಲಾಸೆಗೊಳಿಸಿತು. ಸರ್ಕಾರದ ಬಜೆಟ್‌ನ ಹಣ, ಭೂಮಿಯನ್ನು ನೀಡಿದೆ. ಶಿಕ್ಷಣ ರಂಗವನ್ನು ಕೋಮುವಾದಿಕರಿಸುತ್ತಿದ್ದು, ಪಠ್ಯಕ್ರಮವನ್ನೇ ಮುಂದಿನ ವರ್ಷದಿಂದ ಬದಲಾಯಿಸುತ್ತಿರುವುದನ್ನೂ, ಭಗವದ್ಗೀತೆಯನ್ನು ಶಿಕ್ಷಣದ ಭೋಧನೆಯ ಭಾಗವನ್ನಾಗಿಸುವ ಷಡ್ಯಂತ್ರವನ್ನು ಸಮ್ಮೇಳನವು ತೀವ್ರವಾಗಿ ವಿರೋಧಿಸುತ್ತದೆ. ಆ ಪ್ರಯತ್ನಗಳನ್ನು ಕೈಬಿಡಬೇಕೆಂದು ಆಗ್ರಹಿಸುತ್ತದೆ.

ಈಗಲೂ ರಾಜ್ಯದಲ್ಲಿ ಮತ್ತೇ ಚರ್ಚ್‌ಮೇಲೆ ದಾಳಿಗಳು ಆರಂಭಗೊಂಡಿವೆ. ಸಂಘಪರಿವಾರವೂ ಕೋಮು ದ್ವೇಷವನ್ನು ಹೆಚ್ಚಿಸುವ ಕೃತ್ಯದಲ್ಲಿ ತೊಡಗಿದೆ. ಕೇಂದ್ರದ ಸಂಘಟಿತ ಗಲಭೆಗಳ(ಕೋಮು) ನಿರ್ಬಂಧದ ಕುರಿತ ಮಸೂದೆಯ ವಿರುದ್ಧ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ದ್ವೇಷದ ಪ್ರಚಾರ ನಡೆಸುತ್ತಿದೆ. ಅಪಾಯಕಾರಿಯಾದ ಜಾನುವಾರು ಹತ್ಯೆ ಕಾಯ್ದೆಯನ್ನು ಅಂಗೀಕರಿಸುವಂತೆ ರಾಷ್ಟ್ರಪತಿಗಳ ಮೇಲೆ ಒತ್ತಡ ಹೇರುತ್ತಿದೆ. ಇವು ಇನ್ನಷ್ಟು ಹೆಚ್ಚಲಿವೆ. ಸಿಂದಗಿಯ ತಹಶೀಲ್ದಾರರ ಕಛೇರಿಯ ಧ್ವಜ ಸ್ಥಂಭಕ್ಕೆ ಪಾಕಿಸ್ತಾನದ ಧ್ವಜವನ್ನು ಕಟ್ಟಿ ಇಡೀ ರಾಜ್ಯದ್ಯಾಂತ ಅಲ್ಪಸಂಖ್ಯಾತರ ಮೇಲೆ ತೀವ್ರ ಧಾಳಿಗಳು ನಡೆಯುವಂತೆ ಸಂಘಪರಿವಾರದ ಶ್ರೀರಾಮ ಸೇನೆ ಯೋಜಿಸಿದ ಕುತಂತ್ರವನ್ನು ಸಮ್ಮೇಳನವು ಖಂಡಿಸುತ್ತದೆ. ಈಗಲೂ ಬಿಡಿ ಬಿಡಿ ಘಟನೆಗಳ ಮೂಲಕ ಕೋಮುವಾದಿ ಕ್ರೋಢಿಕರಣಕ್ಕೆ ಆ ಮೂಲಕ ಕಳೆದು ಹೋಗುತ್ತಿರುವ ನೆಲೆಯನ್ನು ಬಿಜೆಪಿಗೆ ದೊರಕಿಸಲು ಮುಂಬರುವ ಚುನಾವಣೆಗಳ ಮೇಲೆ ಕಣ್ಣಿರಿಸಿ ಕಾರ್ಯಾಚರಣೆ ನಡೆಸುತ್ತಿರುವುದನ್ನು ಗುರುತಿಸುತ್ತದೆ.

ಇಂತಹ ಪಿತೂರಿಗಳನ್ನು ಜನತೆ ಸೋಲಿಸಬೇಕೆಂದು ಜನತೆಯಲ್ಲಿ ವಿನಂತಿಸುತ್ತದೆ. ಕೋಮುವಾದಿ ಶಕ್ತಿಗಳ ವಿರುದ್ಧ ಎಲ್ಲಾ ಪ್ರಗತಿಪರ, ಜಾತ್ಯಾತೀತ ಶಕ್ತಿಗಳು ಪ್ರತಿರೋಧ ಒಡ್ಡಬೇಕು. ಆ ದಿಕ್ಕಿನಲ್ಲಿ ವಿಶಾಲವಾದ ಕಾರ್ಯಾಚರಣೆಗೆ ಇಳಿಯಬೇಕೆಂದು ಸಮ್ಮೇಳನವು ಕರೆ ನೀಡುತ್ತದೆ. □

'ಬರ ಪರಿಹಾರ ಕಾಮಗಾರಿ ತೀವ್ರತಗೊಳಿಸಿ'

ಬಿಜಾಪುರ ಸಿಪಿಐ(ಎಂ) ಸಮ್ಮೇಳನದ ಆಗ್ರಹ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) 18ನೇ ಜಿಲ್ಲಾ ಸಮ್ಮೇಳನವು 25-26 ಡಿಸೆಂಬರ 2011 ರಂದು ನಡೆದಿದೆ.

ಮೊದಲ ದಿವಸದಂದು ಬೃಹತ್ ರ್‍ಯಾಲಿ, ಬಹಿರಂಗ ಸಭೆ ನಡೆಯಿತು. ಅಧಿವೇಶನಕ್ಕೂ ಮೊದಲು ಸಭಾಂಗಣದ ಮುಂದೆ ಪಕ್ಷದ ಧ್ವಜಾರೋಹಣ ಬ.ಬಾಗೇವಾಡಿ ತಾಲೂಕಿನ ಹಿರಿಯ ಮುಖಂಡ ರಾಂಚಂದ್ರ ರೂಡಗಿಯವರ ಹಸ್ತದಿಂದ ನಡೆಯಿತು. ನಂತರ ಘೋಷಣೆಗಳನ್ನು ಕೂಗುತ್ತಾ ಸರತಿ ಸಾಲಿನಲ್ಲಿ ಸಾಗಿ ಹುತಾತ್ಮ ಸಂಗಾತಿಗಳ ಸ್ಮಾರಕ ಸ್ತಂಭಕ್ಕೆ ಪುಷ್ಪ ಅರ್ಚನೆ ಮಾಡಿ ಕೆಂಪು ವಂದನೆ ಸಲ್ಲಿಸಲಾಯಿತು. ಸುರೇಖಾ ರಜಪೂತ ಖಾಜೆಸಾಬ ಕೋಲಾರ ಭೀಮಶಿ ಕಲಾದಗಿ ಈ ಮೂವರ ಅಧ್ಯಕ್ಷ ಮಂಡಳಿ ಸಮ್ಮೇಳನ ನಡೆಸಿಕೊಟ್ಟಿತು. ಅಗಲಿದ ಸಂಗಾತಿಗಳಿಗೆ 2 ನಿಮಿಷ ಮೌನ ಶ್ರದ್ಧಾಂಜಲಿ ಸಲ್ಲಿಸಲಾಯಿತು.

2009 ರ ಸಪ್ಟಂಬರ್ ಕೊನೆಯ ವಾರದಲ್ಲಿ ಬಿದ್ದ ಭಾರಿ ಮಳೆಯಿಂದ ಸುಮಾರು 25 ಸಾವಿರಕ್ಕೂ ಹೆಚ್ಚು ಮನೆಗಳು 25 ಕ್ಕೂ ಹೆಚ್ಚು ಜನ ಪ್ರಾಣ. ಕಳೆದುಕೊಂಡರು. ಆದರೆ ರಾಜ್ಯ ಸರ್ಕಾರವು ಸಮರ್ಪಕ ಪರಿಹಾರ ವಿತರಿಸಲಾಗದೆ ಬಿಜೆಪಿ ಸರ್ಕಾರವು ವಿಫಲವಾಯಿತು. ನಿಜವಾಗಿ ಮನೆ ಕಳೆದುಕೊಂಡಿದ್ದ ಸಂತ್ರಸ್ಥರಿಗೆ ಸರಿಯಾಗಿ ಪರಿಹಾರ ಸಿಗದೆ. ಮನೆ ಕಳೆದುಕೊಳ್ಳದೆ ಇದ್ದವರಿಗೆ ಹೆಚ್ಚಿನ ಪರಿಹಾರ ಸಿಗುವಂತಾಯಿತು. ಇದರಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದ್ದೆ ಕಾರಣವಾಗಿದೆ. ಈ ಕುರಿತು ಸರ್ಕಾರದ ಗಮನಕ್ಕೆ ಹಲವು ಸಲ ತಂದರು ಸರಿಯಾದ ಕ್ರಮ ಸರ್ಕಾರ ಜರುಗಿಸಲಿಲ್ಲ.

ಈಗ ಮಳೆಯಿಲ್ಲದೆ ಜಿಲ್ಲೆ ಭೀಕರ ಬರಗಾಲದ ತೆಕ್ಕಗೆ ಬಿದ್ದಿದೆ. ರೈತರು ಹೊಲಕ್ಕೆ ಹಾಕಿದ ಗೊಬ್ಬರ, ಬೀಜ, ಶ್ರಮ ಮುಂತಾದವು ಹಾಳಾಗಿದ್ದು, ಬೆಳೆ ಇಲ್ಲದೆ ದನಕರುಗಳಿಗೆ ಮೇವು ನೀರು ಇಲ್ಲದೇ ಕಣ್ಣೀರು ಇಡುತ್ತಿದ್ದಾರೆ. ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಬರಗಾಲ ಸಮೀಕ್ಷೆಯ ನಾಟಕವನ್ನಾಡುತ್ತಾ ಇಲ್ಲಿಯುವರೆಗೆ ಯಾವುದೇ ಪರಿಹಾರ ಕೆಲಸಗಳನ್ನೇ ಕೈಗೆತ್ತಿಕೊಳ್ಳದೇ ಮೌನವಾಗಿವೆ.

ಸಂಜೆ 7-00 ಗಂಟೆ ಸುಮಾರಿಗೆ ವಿದ್ಯುತ್ತನ್ನು ಕಟ್ ಮಾಡಲಾಗುತ್ತದೆ. ಹೀಗಾಗಿ ನಗರ ಪಟ್ಟಣ ಪ್ರದೇಶದ ಸಣ್ಣಪುಟ್ಟ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ಅನಿವಾರ್ಯವಾಗಿ ವಿದ್ಯುತ್ ಜನಕಗಳ (ಜನರೇಟರ್)ಗಳನ್ನು ವಿದ್ಯುತ್ ಚಾರ್ಜಿಂಗ್ ಬ್ಯಾಟರಿಗಳು ಮುಂತಾದ ಬೃಹತ್ ಕೈಗಾರಿಕಾ ಬಂಡವಾಳಗಾರರ ಉತ್ಪಾದಕ ಸರಕುಗಳನ್ನು ಖರೀದಿಸುವಂತೆ ಮಾಡಲಾಗುತ್ತಿದೆ. ಇಷ್ಟು ಮಾತ್ರವಲ್ಲದೆ , ಈ ವಿದ್ಯುತ್ ಕೊರತೆಯಿಂದ ಹಾಗೂ ಗುತ್ತೇದಾರಿ ಬಂಡವಾಳ ಶಾಹಿ ಪರನೀತಿಯಿಂದ ಕೃಷಿಯ ಚಕ್ರಟ್ಟಿಗೆ ಸಿಲುಕಿ ಕೃಷಿ ಅವಲಂಬಿತ ಸಣ್ಣ ಕೈಗಾರಿಕೆಗಳಾದ ಎಣ್ಣೆ ಮಿಲ್ಲು, ಹತ್ತಿಯ ಮಿಲ್ಲು, ಶೇಂಗಾ ಒಡೆಯುವ ಮಿಲ್ಲು, ಬೆಳೆ ಮಿಲ್ಲು ಮುಂತಾದವು ಮುಚ್ಚಿ ಹೋಗಿವೆ. ಅಲ್ಲಿ ಕೆಲಸ ಮಾಡುತ್ತಿದ್ದ ಮಾಲಿಕರು ಸಾಲ ಶೂಲಕ್ಕೆ ಸಿಕ್ಕು ದಿವಾಳಿಯಾಗಿದ್ದಾರೆ. ಅಲ್ಲಿನ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ.

ದೊಡ್ಡ ಮೀನು, ಸಣ್ಣ ಮೀನು ನುಂಗಿತು ಎಂಬಂತೆ ಇವತ್ತು ಜಿಲ್ಲೆಯ ಜನರ ಪರಿಸ್ಥಿತಿಯಾಗಿದೆ. ರೈತರು ಅಭಿವೃದ್ಧಿ ಹೆಸರಿನಲ್ಲಿ ಭೂಮಿ ಕಳೆದುಕೊಳ್ಳುತ್ತಿದ್ದಾರೆ. ಭೂತಗಳಾದ ಬಹುರಾಷ್ಟ್ರೀಯ ಕಂಪನಿಗಳಾದ ಮೆಟ್ರೋ, ವಾಲ್ ಮಾರ್ಟಿನದಂತಹ ದೈತ್ಯ ಕಂಪನಿಗಳು ಚಿಲ್ಲರೆ ವ್ಯಾಪಾರದಲ್ಲಿ ನೇರ ಬಂಡವಾಳ ಹೂಡುವಂತೆ ಕೇಂದ್ರ ಹಾಗೂ ರಾಜ್ಯ ಸಕಾರಗಳೂ ಸಂಚು ನಡೆಸಿವೆ. ಇದರಿಂದ ಜಿಲ್ಲೆಯ ಜವಳಿ ಕಿರಾಣಿ ಸ್ಟೇಷನರಿ ಮುಂತಾದ ವ್ಯಾಪರಸ್ಥರ ಸಮಾಧಿಯಾಗಲಿದೆ. ಈ ಕುರಿತು ಜಿಲ್ಲೆಯ ಜನ ಎಚ್ಚರವಾಗಿದ್ದು, ಸಂಘಟಿತ ಹೋರಾಟಕ್ಕೆ ಮುಂದಾಗಬೇಕು ಎಂದರು. ಇನ್ನೊಂದೆಡೆ ವ್ಯಾಪಕ ಬೃಹತ ಪ್ರಮಾಣದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು



ಭ್ರಷ್ಟಾಚಾರದಲ್ಲಿ ಮುಳಗಿ ಹೋಗಿದ್ದಾರೆ. ಇವರನ್ನು ಸಾರಾಸಗಟಾಗಿ ಕಸದ ಗುಂಡಿಗೆ ಎಸೆಯುವಂತೆ ಆಗಬೇಕಾಗಿದೆ. ಎಂದರು.

ರಾಜ್ಯದ ಜನತೆ ಕೋಮುವಾದದ ಅಪಾಯವಿದೆ. ದಲಿತ, ಹಿಂದುಳಿದ ಅಲ್ಪ ಸಂಖ್ಯಾತರಿಗೆ ನ್ಯಾಯ ಸಿಗದಂತಾಗಿದೆ. ಮನೆ ನಿವೇಶನ ಪಡಿತರ ಚೀಟಿ, ಪಡಿತರ ಆಹಾರಧಾನ್ಯ, ಚಿಮಣಿ ಎಣ್ಣೆ (ಸೀಮೆಎಣ್ಣೆ) ಮುಂತಾದವುಗಳಿಂದ ಬಡ ಜನರು ವಂಚಿತರಾಗಿದ್ದಾರೆ ಎಂದರು.

ನೂತನ ಸಮಿತಿ

ಜಿಲ್ಲಾ ಸಮಿತಿ ಕಾರ್ಯದರ್ಶಿ ಭೀಮಶಿ ಕಲಾದಗಿ, ಕಾರ್ಯದಶಿ ಮಂಡಳಿಯ ಸದಸ್ಯರಾಗಿ ಅಣ್ಣಾರಾಯ ಈಳಗೇರ, ಸುರೇಖಾ ರಜಪೂತ್, ಶಂಕರ ರಾವ್, ಶಮೀರ ಅಲಿ ಕೆ, ಸಂಜೀವ ರಾವ್, ಜಿಲ್ಲಾ ಸಮಿತಿ ಸದಸ್ಯರಾಗಿ- ರಾಮಣ್ಣ ಶಿರಾಗೋಳ, ಖಾಜೆಸಾಬ ಕೋಲಾರ,ಜುಬೇ ಹಣಗಿ, ಭೀಮಶಿ ಕೋಟ್ಯಾಳ, ವೀರಸಂಗಯ್ಯ, ಪುಂಡಲಿಕ ಹಂದಿಗನೂರ, ಭೀಮಾಶಂಕರ ಪೂಜಾರಿ, ಭಾರತಿ ವಾಲಿ, ಎಲ್. ವೈ. ಹಂದ್ರಾಳ, ಎಂ.ಬಿ. ಕೊರಬೂರ

ಪ್ರಮುಖ ನಿರ್ಣಯಗಳು

ನೀರಾವರಿ ಯೋಜನೆಗಳ ಜಾರಿ

ಕೃಷ್ಣ ಮೇಲ್ದಂಡೆ ಯೋಜನೆಯ ಅಂತಿಮ ಹಂತದ ಅಂತಿಮ ಯೋಜನೆಯಲ್ಲಿ ಅಲಮಟ್ಟಿಯಲ್ಲಿ 519 ಮೀಟರ್ ಎತ್ತರದ ನಂತರ ಸುಪ್ರಿಂಕೋರ್ಟಿನ ಅಂತಿಮ ತೀರ್ಪು 524 ಮೀ. ನೀರು ನಿಲ್ಲಿಸಲು ಅಸ್ತು ನೀಡಿದೆ. 60 ವರ್ಷಗಳಿಂದ ನಡೆದು ಬಂದ ಅವಳಿ ಜಿಲ್ಲೆಗಳ ನೀರಾವರಿ ಹೋರಾಟ ಈಗಲೂ ಮುಂದುವರಿದಿದೆ. ಯೋಜನೆಯಿಂದ 120



ಹಳ್ಳಿಗಳ ಮುಳುಗಡೆಯಾಗಲಿದ್ದು, ಭೂ-ಸ್ವಾಧೀನಕ್ಕೆ 16,500 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇದರಿಂದ ವಿಜಾಪುರ ಜಿಲ್ಲೆಯ ಮುಳವಾಡ ಏತ ನೀರಾವರಿ, ಚಿಮ್ಮಲಗಿ ಏತ ನೀರಾವರಿ, ಗುತ್ತಿ ಬಸವಣ್ಣ ಏತ ನೀರಾವರಿ ಯೊಜನೆಗಳು ನಿರ್ಮಾಣಗೊಳ್ಳಲಿವೆ. ಕೆರೆಗೆ ನೀರು ತುಂಬುವ ಯೋಜನೆ, ಬದೂ ನೀರಿನ ಹಂಚಿಕೆ ಮುಂತಾದ ಯೋಜನೆಗಳ ಜಾರಿಗಾಗಿ ಸಮ್ಮೇಳನವು ಒತ್ತಾಯಿಸಿತು.ಸದರಿ ನೀರಾವರಿ ಯೋಜನೆಗಳನ್ನು ಶೀಘ್ರದಲ್ಲಿ ಮುಂದಿನ 3 ವರ್ಷಗಳ ಒಳಗಾಗಿ ಜಾರಿಗೊಳಸಬೇಕು. ಉಲ್ಲೇಖವಾದರೆ ಅಂತಿಮ ಹೋರಾಟಗಳನ್ನು ನಡೆಸಲು ಜಿಲ್ಲೆಯ ರೈತರು ಹೋರಾಟಕ್ಕೆ ಸಿದ್ಧರಾಗಬೇಕೆಂದು ಅದನ್ನು ನೇತೃತ್ವ ವಹಿಸಲು ಮುಂದಾಗಬೇಕೆಂದು ನಿರ್ಣಯ ಕೈಗೊಂಡಿತು.

ಕೂಡಗಿ ವಿದ್ಯುತ್ ಸ್ಥಾವರ

ಅಭಿವೃದ್ಧಿಗೆ ಅವಶ್ಯಕವಾಗಿರುವ ವಿದ್ಯುತ್ ಉತ್ಪಾದನೆಯ ಕೂಡಗಿ ವಿದ್ಯತ್ ಘಲಕವನ್ನು ಜಾರಿಗೊಳಿಸಬೇಕು. ಜತೆಯಲ್ಲಿ ರೈತರಿಂದ ವಶಪಡಿಸಿಕೊಳ್ಳಲಾದ ಭೂಮಿಯ ಮಾಲಿಕರಿಗೆ ಒಳ್ಳೆಯ ಬೆಲೆಯನ್ನು ನೀಡಬೇಕು. ಭೂಮಿ ಕಳೆದುಕೊಂಡವರಿಗೆ ಬೇರೆ ಕಡೆ ಭೂಮಿ ಕೊಡಿಸಲು ಸೌಲಭ್ಯಗಳನ್ನು ಕೊಡಬೇಕು. ಮತ್ತು ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗವನ್ನು ನೀಡಬೇಕೆಂದು ಹಾಗೂ ಶಾಶ್ವತ ಪರಿಹಾರಗಳನ್ನು ರೂಪಿಸಬೇಕೆಂದು ಸಮ್ಮೇಳನವು ಒತ್ತಾಯಿಸಿತು.



ಬರಗಾಲ ಪರಿಹಾರ

ವಿಜಾಪುರ ಜಿಲ್ಲೆಯು ಶಾಶ್ವತ ಬರಗಾಲಕ್ಕೆ ತುತಾಗುತ್ತಿದ್ದು, 2011 - ಮುಂಗಾರಿ, ಹಿಂಗಾರಿ ವಿಫಲವಾಗಿದ್ದು, ರೈತರು ಕಂಗಾಲಾಗಿದ್ದಾರೆ. ಆದ್ದರಿಂದ ಕಾಮಗಾರಿಗಳನ್ನು ಜಾರಿಗೆ ತರುವ ಬದಲು ರೈತರ ಬ್ಯಾಂಕ್ ಖಾತೆಗೆ ನೇರ ಪರಿಹಾರ ಧನವನ್ನು ಸರ್ಕಾರ ಮಂಜೂರುಗೊಳಿಸಬೇಕು. ಭೂಮಿ ಇಲ್ಲದೆ ರೈತ ಕಾರ್ಮಿಕರಿಗೆ ನೇರವಾಗಿ ಅಕೌಂಟಿಗೆ ಪರಿಹಾರ ಧನ ನೀಡಬೇಕು. ಬರಪರಿಹಾರ ಕಾಮಗಾರಿ ಹಣ ಭ್ರಷ್ಟಾಚಾರದಲ್ಲಿ ಸೋರಿ ಹೋಗುತ್ತಿದ್ದು, ಹಣವನ್ನು ಬರಗಾಲದಿಂದ ಬಾಧಿತರಾಗಿರುವ ರೈತ ಕಾರ್ಮಿಕರಿಗೆ ಯಾವುದೇ ಕಾಮಗಾರಿ ನಡೆಸದೆ ಪರಿಹಾರ ಧನ ಮೊತ್ತವನ್ನು ಆಯಾ ಜನಗಳಿಗೆ ಬ್ಯಾಂಕಿನ ಖಾತೆಗಳಿಗೆ ಜಮಾ ಮಾಡಬೇಕೆಂದು ಸಮ್ಮೇಳನವು ಒತ್ತಾಯಿಸಿದೆ. ರೈತರಿಗೆ ಗೋ ಶಾಲೆ ಮತ್ತು ಕುಡಿಯುವ ನೀರು ಒದಗಿಸಬೇಕು.

ರೈಲ್ವೆಯ ಯೋಜನೆ

ಸುದೀರ್ಘ ಹೋರಾಟದ ನಂತರ ರೈಲ್ವೆ ಮಾರ್ಗ ಬ್ರಾಡ್‌ಗೇಜ್‌ಗೆ ಪರಿವರ್ತನೆಯಾಗಿದ್ದು, ವಿಜಾಪುರಕ್ಕೆ ಭಾರತದ ಎಲ್ಲ ಭಾಗಗಳಿಗೆ ರೈಲುಗಳು ನವೀಕರಣವನ್ನು ಕಲ್ಪಿಸಬೇಕು, ಬೆಂಗಳೂರಿನಿಂದ ದೆಹಲಿಗೆ ಹೋಗುವ ರೈಲುಗಳನ್ನು ವಿಜಾಪುರದ ಮಾರ್ಗದಿಂದಲೂ ಓಡಿಸಬೇಕು. ಹಾಗೂ ಬೆಂಗಳೂರಿನಿಂದ ಹೊಸಪೇಟೆಯ ರೈಲ್ವೆ ಮಾರ್ಗದಿಂದ ಗದಗನಿಂದ ವಿಜಾಪುರಕ್ಕೆ ಹೊಸ ರೈಲನ್ನು ಮಾಡಬೇಕು. ಬಾಂಬೆಯಿಂದ ಹೊರಡುವ ರೈಲುಗಳನ್ನು ಕೊಲ್ಕತ್ತಾ, ಹೈದ್ರಾಬಾದ್, ಚೆನ್ನೈಗಳಿಗೆ ವಿಜಾಪುರ ಮಾರ್ಗದಿಂದ ರೈಲು ಹೊರಡಬೇಕು.

ರೈಲ್ವೆ ಮೇಲ್ ಸೇತುವೆ

ವಿಜಾಪುರ ನಗರಕ್ಕೆ ಸಂಪರ್ಕಿಸುವ ಬೆಂಗಳೂರು ರೈಲ್ವೆ ಹುಬ್ಬಳ್ಳಿ ಮಾರ್ಗಗಳಲ್ಲಿ ರೈಲ್ವೆ ಮೇಲ್ ಸೇತುವೆಗಳು ಇಬ್ರಾಹಿಂಪುರದ 2 ಭಾಗಕ್ಕೂ ಅಂದರೆ ಬ.ಬಾಗೇವಾಡಿ ರಸ್ತೆ ಹಾಗೂ ಬಾಲಗಕೋಟ ರಸ್ತೆ ಎರಡು ಮಾರ್ಗಗಳಲ್ಲಿ ಮೇಲ್ ಸೇತುವೆ ನಿರ್ಮಾಣವಾಗಬೇಕು. ಸಾವಿರಾರೂ ಕುಟುಂಬಗಳು ಹಾಗೂ ವಾಹನಗಳ ಸಂಚಾರವನ್ನು ಸುಗುಮಗೊಳಿಸಬೇಕು.

ವಿಜಾಪುರ ನಗರದ ಅಭಿವೃದ್ಧಿ

ವಿಜಾಪುರ ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕುಡಿಯುವ ನೀರು, ಒಳಚರಂಡಿ, ರಸ್ತೆ ಕಾಮಗಾರಿಗಳನ್ನು ಶೀಘ್ರವಾಗಿ ಮಾಡಿ ಮುಕ್ತಾಯಗೊಳಿಸಬೇಕು. ಮಾಸ್ಟರ್ ಪ್ಲ್ಯಾನ್ ಮತ್ತು ಪರಾತತ್ವ ಸ್ಮಾರಕಗಳ ರಕ್ಷಣೆಗೆ ಸಂಬಂಧಿಸಿದ ಕಾಯ್ದೆಗಳಿಂದ ಬಾಧಿತವಾಗಿರುವ ಬಡಜನರಿಗೆ ಪರಿಹಾರ ವಸತಿ ಯೋಜನೆಗಳನ್ನು ರೂಪಿಸಬೇಕು. ಮತ್ತು ಅವರಿಗೆ ಸಮರ್ಪಕವಾಗಿ ಪರಿಹಾರವನ್ನು ಘೋಷಿಸಬೇಕು. ಅಕ್ರಮ ಭೂಮಿ ಸಾಗುವಳಿ ಮಾಡುವ ರೈತರಿಗೆ ಸಕ್ರಮಗೊಳಿಸಿ, ಹಕ್ಕು ಪತ್ರ ನೀಡಬೇಕು.

ತೊಗರಿ, ಈರುಳ್ಳಿ, ಕಬ್ಬು ಬೆಲೆ ಇಳಿದಿದ್ದು, ರೈತರು ಬರಗಾಲದಲ್ಲಿ ಕಷ್ಟಪಟ್ಟು ಬೆಳೆದ ಅಲ್ಪ-ಸ್ವಲ್ಪ ಬೆಳೆಗಳಿಗೆ ಬೆಲೆ ಇಲ್ಲದಂತಾಗಿದೆ. ಕ್ವಿಂಟಾಲ್ ತೊಗರಿಗೆ 5,000/- ಈರುಳ್ಳಿ 1000/- ಬೆಲೆ ನಿಗದಿಗೊಳಿಸಬೇಕು. ಇಲ್ಲವೆ ರೈತರಿಗೆ ಪರಿಹಾರ ಘೋಷಿಸಬೇಕು.

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಕೆಂಪು ಕಂಪಿನೊಳಗೆ ಸಾಂಸ್ಕೃತಿಕ ಕಲರವ



ಜನರ ನಡುವಿನಲ್ಲಿ ಅರಳಿದ ಕೆಂಪು ಹೂವು.... ಜನನಾಯಕ ಎ.ಕೆ.ಗೋಪಾಲನ್‌ರವರ ಕುರಿತ ವರ್ಣಚಿತ್ರ ಪ್ರದರ್ಶನ.ಸಮ್ಮೇಳನದ ಆವರಣದಲ್ಲೆಲ್ಲಾ ಕ್ರಾಂತಿಕಾರಿಗಳ ಉದ್ಘೋಷಗಳ ಚಿತ್ತಾರ.



ಕ್ರಿಯಾ ಪ್ರಕಾಶನದ 'ಸಮಕಾಲೀನ ಭಾರತ' ಪುಸ್ತಕ ಬಿಡುಗಡೆ. ಪೊಲಿಟ್‌ಬ್ಯೂರೋ ಸದಸ್ಯರಾದ ಕೆ.ವರದರಾಜನ್‌ರವರಿಂದ. ಜೊತೆಗೆ ಇನ್ನೊರ್ವ ಪಿ.ಬಿ.ಸದಸ್ಯರಾದ ಕಾಂ.ಎಸ್.ರಾಮಚಂದ್ರನ್‌ಪಿಳ್ಳೆ.





ತೆಲಂಗಾಣ ವೀರ ತೆಲಂಗಾಣ...... ಜನರಿಂದ ಅಪಾರ ಸ್ಪಂದನ ಪಡೆದ ತೆಲಂಗಾಣ ವೀರ ಸಶಸ್ತ್ರ ಹೋರಾಟದ ವೀರಗಾಥೆ..... ಆಂಧ್ರದ ಪ್ರಜಾನಾಟ್ಯ ಮಂಡಳಿಯಿಂದ







JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH